Extracts of the proceedings
of the 166TH BOM Meetings
held on 19-11-2021

<u>ವಿಷಯ ಸಂಖ್ಯೆ : 166.15</u>

ವಿಷಯ : ಹಣಕಾಸು ಸಮಿತಿಯ 83ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ.

* * * * * * *

ದಿನಾಂಕ: 17.11.2021ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 83ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 166ನೇ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * * *

<u>ತೀರ್ಮಾನ</u> :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿ.ವಿ.ನಿಲಯದ 83ನೇ ಹಣಕಾಸು ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸಿತು.

* * * * * * *

ಕುಲಸಚಿವ

ಕುಲಸಚಿವ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು–570006.**

**ದಿನಾಂಕ 17–11–2021 ರಂದು ಮಧ್ಯಾಹ್ನ 3.00 ಗಂಟೆಗೆ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 83 ನೇ ಹಣಕಾಸು ಸಮಿತಿ ಸಭೆಯ ನಡವಳಿ.**

| ಉಪಸ್ಥಿತರು | |
|---|---|
| ಕುಲಪತಿಗಳು<br>ಹಣಕಾಸು ಸಮಿತಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | ಶ್ರೀ ಎಲ್.ನಾಗೇಂದ್ರ<br>ಎಂ.ಎಲ್.ಎ.<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಮೈಸೂರು. |
| ಶ್ರೀ ಎನ್.ಕೃಷ್ಣೇಗೌಡ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಮೈಸೂರು. | ಕುಲಸಚಿವರು<br>ಹಣಕಾಸು ಸಮಿತಿಗೆ ಖಾಯಂ ಆಹ್ವಾನಿತರು,<br>ಕರಾಮುವಿ, ಮೈಸೂರು. |
| ಹಣಕಾಸು ಅಧಿಕಾರಿಗಳು<br>ಹಣಕಾಸು ಸಮಿತಿಯ ಸದಸ್ಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು. | |
| **ಅನುಪಸ್ಥಿತರು** | |
| ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ (ವೆಚ್ಚಗಳು) ಕರ್ನಾಟಕ ಸರ್ಕಾರ ಮತ್ತು ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು. | ಕಾರ್ಯದರ್ಶಿಗಳು<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ವ್ಯವಸ್ಥಾಪನಾ ಮಂಡಳಿಯ ಸದಸ್ಯರು, ಬೆಂಗಳೂರು. |

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸಿ, ಕಾರ್ಯಸೂಚಿಯಂತೆ ವಿಷಯ ಮಂಡಿಸಲು ಹಣಕಾಸು ಅಧಿಕಾರಿಗಳಿಗೆ ಸೂಚಿಸಿದರು. ಅಧ್ಯಕ್ಷರ ಅಪ್ಪಣೆ ಮೇರೆಗೆ, ಕೆಳಕಂಡ ವಿಷಯಗಳನ್ನು ಹಣಕಾಸು ಅಧಿಕಾರಿಗಳು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ: 83.1**

ದಿನಾಂಕ 03–03–2021 ರಂದು ನಡೆದ 82ನೇ ಹಣಕಾಸು ಸಮಿತಿ ಸಭೆಯ ನಡವಳಿಯ ಸ್ಥಿರೀಕರಣದ ಬಗ್ಗೆ.

**ತೀರ್ಮಾನ :**

**ಹಣಕಾಸು ಸಮಿತಿಯ 82ನೇ ಸಭೆ ನಡವಳಿಯನ್ನು ಅವಗಾಹಿಸಿ ಸ್ಥಿರೀಕರಿಸಲಾಯಿತು.**

**ವಿಷಯ ಸಂಖ್ಯೆ: 83.2**

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2020–21 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆ ಕೋರಿರುವ ಬಗ್ಗೆ**

Arupma

ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಸಾಮಾನ್ಯ ನಿಧಿ ಖಾತೆ, ಪರೀಕ್ಷಾ ನಿಧಿ ಖಾತೆ, ಪಿಂಚಣಿ ಖಾತೆ, ನೂತನ ಪಿಂಚಣಿ, ಪೀಠಗಳು ಹಾಗೂ ಇತರೆ ಎಲ್ಲಾ ಖಾತೆಗಳ ವಾಸ್ತವಿಕ ಆದಾಯ ಮತ್ತು ಖರ್ಚು ವೆಚ್ಚಗಳನ್ನು ಖಾತೆವಾರು ಕ್ರೋಢೀಕರಿಸಿ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದ್ದು, ಸಂಕ್ಷಿಪ್ತ ವಿವರಗಳು ಕೆಳಗಿನಂತಿದೆ.

**ಆದಾಯ ಮತ್ತು ವೆಚ್ಚದ ವಿವರ**

2020-21ನೇ ಸಾಲಿನಲ್ಲಿ ಪ್ರವೇಶಾತಿ ಶುಲ್ಕ ಹಾಗೂ ಇತರೆ ಶುಲ್ಕಗಳು, ವಿಶ್ವವಿದ್ಯಾನಿಲಯ ಕ್ರೋಢೀಕರಿಸಿರುವ ಠೇವಣಿಗಳಿಂದ ಬರುವ ಬಡ್ಡಿ, ಕಟ್ಟಡಗಳಿಂದ (ಅತಿಥಿ ಗೃಹ, ವಿದ್ಯಾರ್ಥಿ ನಿಲಯ, ಘಟಿಕೋತ್ಸವ ಭವನ ಮತ್ತು ಇತರೆ) ವಿ.ವಿ.ಯು ಆದಾಯಗಳಿಸುತ್ತಿದ್ದು ರೂ. 61,12,71,915/-ಗಳು ಸಂಗ್ರಹವಾಗಿರುತ್ತದೆ.

2020-21ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಕಾರ್ಯಚಟುವಟಿಕೆಗಳು ಮತ್ತು ನಿರ್ವಹಣೆ, ಅಧ್ಯಾಪಕ ಹಾಗೂ ಅಧ್ಯಾಪಕೇತರ ಸಿಬ್ಬಂದಿ ವೇತನ ಮತ್ತು ಭತ್ಯೆಗಳು, ಜಾಹೀರಾತು ವೆಚ್ಚ, ಕಾಮಗಾರಿಗಳು, ಪೀಠೋಪಕರಣ ಖರೀದಿ, ಸಿದ್ಧಪಾಠ ರಚನೆ, ಸಿದ್ಧಪಾಠ ಮುದ್ರಣ ಇತ್ಯಾದಿಗಾಗಿ ರೂ. 54,08,19,714/-ಗಳು ವೆಚ್ಚ ಮಾಡಲಾಗಿರುತ್ತದೆ. ಪರೀಕ್ಷಾ ನಿಧಿ ಖಾತೆಯಲ್ಲಿ ಸದರಿ ಸಾಲಿನಲ್ಲಿ ಪರೀಕ್ಷಾ ಶುಲ್ಕ, ಘಟಿಕೋತ್ಸವ ಶುಲ್ಕ, ಠೇವಣಿ ಮೇಲಿನ ಬಡ್ಡಿ, ಉಳಿತಾಯ ಖಾತೆ ಮೇಲಿನ ಬಡ್ಡಿ ಹಾಗೂ ಇನ್ನಿತರೆ ಶುಲ್ಕ ಸೇರಿ ರೂ. 8,38,24,036 /- ಗಳ ಆದಾಯ ಸಂಗ್ರಹವಾಗಿರುತ್ತದೆ.

ಪರೀಕ್ಷಾ ಸಂಬಂಧ ಪ್ರಯಾಣ ಹಾಗೂ ಸಭಾ ಭತ್ಯೆಗಳು, ಅಂಚೆ ವೆಚ್ಚ, ಪರೀಕ್ಷಾ ಕೇಂದ್ರಗಳ ವೆಚ್ಚ, ಪ್ರಶ್ನೆ ಪತ್ರಿಕೆ ಹಾಗೂ ಲೇಖನ ಸಾಮಗ್ರಿಗಳ ಮುದ್ರಣ ವೆಚ್ಚ ಹಾಗೂ ಮೌಲ್ಯಮಾಪನ ಸಂಭಾವನೆ ಸೇರಿದಂತೆ ರೂ. 3,23,35,277 /-ಗಳನ್ನು ವೆಚ್ಚ ಮಾಡಲಾಗಿರುತ್ತದೆ. ವೇತನಕ್ಕಾಗಿ ರಾಜ್ಯ ಸರ್ಕಾರದಿಂದ ಬ್ಲಾಕ್ ಅನುದಾನ ನಿಗದಿಯಾಗದಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ, ಬೋಧಕೇತರ ಹಾಗೂ ಇತರೆ ತಾತ್ಕಾಲಿಕ ಸಿಬ್ಬಂದಿ ವರ್ಗಕ್ಕೆ ವೇತನ ಮತ್ತು ಇತರೆ ಭತ್ಯಗಳ ಪಾವತಿಗಾಗಿ ಆಪತ್ಕಾಲದ ವೇತನ (Corpus Fund) ಸ್ಥಾಪಿಸಲಾಗಿದ್ದು, ವಿಶ್ವವಿದ್ಯಾನಿಲಯದ ಆದಾಯ ಕಡಿಮೆ ಆದ ಸಂದರ್ಭದಲ್ಲಿ ಸದರಿ ನಿಧಿಯ ಠೇವಣಿಗಳ ಮೇಲಿನ ಬಡ್ಡಿ ಮೊತ್ತದಿಂದ ವೇತನ ಪಾವತಿಸಲು ಕ್ರಮವಹಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹೆಚ್ಚಾದ್ದರಿಂದ ಸದರಿ ನೌಕರರಿಗೆ ಪಿಂಚಣಿ ಸೌಲಭ್ಯ ಮತ್ತು ಆರ್ಥಿಕ ಸೌಲಭ್ಯಗಳನ್ನು ಪಾವತಿಸುವ ಸಲುವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಂತರಿಕ ಆದಾಯದಿಂದ ಪಿಂಚಣಿ ನಿಧಿ ಹೆಸರಿನಲ್ಲಿ ರೂ. 110,03,86,300/- ಗಳ ಠೇವಣಿ ಹೂಡಲಾಗಿದೆ. ಈ ಠೇವಣಿಯಿಂದ ಬರುವ ಬಡ್ಡಿಯಿಂದ ಪಿಂಚಣಿ ಮತ್ತು ಇತರೆ ಆರ್ಥಿಕ ಸೌಲಭ್ಯಗಳನ್ನು ಪಾವತಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವ ಏಳು ಅಧ್ಯಯನ ಪೀಠಗಳ ಉಳಿತಾಯ ಖಾತೆಯಿಂದ 2020-21ನೇ ಸಾಲಿನಲ್ಲಿ ಬಡ್ಡಿಯ ರೂಪದಲ್ಲಿ ರೂ. 22,49,330/-ಗಳ ಆದಾಯ ಬಂದಿರುತ್ತದೆ. ಸದರಿ ಸಾಲಿನಲ್ಲಿ ಪೀಠದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ರೂ. 5,77,022/-ಗಳನ್ನು ವೆಚ್ಚ ಮಾಡಲಾಗಿರುತ್ತದೆ.

2020-21ನೇ ಸಾಲಿನಲ್ಲಿ ಆರಂಭ ಶಿಲ್ಕು (ಠೇವಣಿಗಳು ಸೇರಿದಂತೆ) ರೂ. 595,75,89,537/-ಗಳಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ವಿವಿಧ ಮೂಲಗಳಿಂದ ಒಟ್ಟು ರೂ. 80,38,60,317/-ಗಳು ಆದಾಯ ಬಂದಿದ್ದು, ರೂ.67,61,02,016/-ಗಳು ವೆಚ್ಚವಾಗಿದ್ದು, ಅಂತಿಮ ಶಿಲ್ಕು (ಠೇವಣಿಗಳು ಸೇರಿದಂತೆ) ರೂ. 596,55,24,314/-ಗಳಾಗಿರುತ್ತದೆ.

ತೀರ್ಮಾನ :

**ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಸಾಮಾನ್ಯ ನಿಧಿ ಖಾತೆ, ಪರೀಕ್ಷಾ ನಿಧಿ ಖಾತೆ, ಪಿಂಚಣಿ ಖಾತೆ, ನೂತನ ಪಿಂಚಣಿ, ಪೀಠಗಳು ಹಾಗೂ ಇತರೆ ಎಲ್ಲಾ ಖಾತೆಗಳ ವಾಸ್ತವಿಕ ಆದಾಯ ಮತ್ತು ಖರ್ಚು ವೆಚ್ಚಗಳನ್ನು ಖಾತೆವಾರು ಕ್ರೋಢೀಕರಿಸಿ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿರುವುದನ್ನು ಹಣಕಾಸು ಸಮಿತಿಯು ಕೂಲಕಂಷವಾಗಿ ಪರಿಶೀಲಿಸಿ, ಚರ್ಚಿಸಿ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 83.3

**2021–22 ನೇ ಸಾಲಿನಲ್ಲಿ ಏಪ್ರಿಲ್ 2021 ರಿಂದ ಸೆಪ್ಟೆಂಬರ್ 2021 ವರೆಗೆ ವಿವಿಧ ಖಾತೆಗಳಿಂದ ಆಂತರಿಕ ನಿಧಿ ವರ್ಗಾವಣೆ ಮಾಡಿರುವ ಬಗ್ಗೆ.**

ಪಿಂಚಣಿ ನಿಧಿ ಖಾತೆಯಲ್ಲಿ 2021–22 ನೇ ಸಾಲಿಗೆ ಕೊರತೆಯಾದ ಮೊತ್ತವನ್ನು ಸಾಮಾನ್ಯ ನಿಧಿ ಖಾತೆಯಿಂದ ವರ್ಗಾಯಿಸಲು ಆಯವ್ಯಯದಲ್ಲಿ ಮೀಸಲಿಟಿದ್ದ ರೂ ಒಂದು ಕೋಟಿ ಮೊತ್ತದಲ್ಲಿ ಪಿಂಚಣಿ ನಿಧಿ ಖಾತೆಗೆ ದಿನಾಂಕ 29.09.2021 ವರೆಗೆ ರೂ 72,00,000/–ಗಳನ್ನು ವರ್ಗಾವಣೆ ಮಾಡಲಾಗಿದೆ.

ಮುಕ್ತ ಸಂಜೀವಿನಿ ಖಾತೆ 64018806640 ರಲ್ಲಿ ಸಂಗ್ರಹವಾಗಿದ್ದ ಬಡ್ಡಿ ಮೊತ್ತ ರೂ 2,00,00,000/– ಗಳನ್ನು ಸಾಮಾನ್ಯ ನಿಧಿ ಖಾತೆಗೆ ವರ್ಗಾಯಿಸಲು ಆಯವ್ಯಯದಲ್ಲಿ ಮೀಸಲಿಟಿದ್ದ ಮೊತ್ತವನ್ನು ವೇತನ ಮತ್ತು ಇತರ ವೆಚ್ಚಗಳಿಗಾಗಿ ಸಾಮಾನ್ಯ ನಿಧಿ ಖಾತೆ 54035420117 ಗೆ ದಿನಾಂಕ 04.09.2021 ರಂದು ವರ್ಗಾವಣೆ ಮಾಡಲಾಗಿದೆ. ಹೆಚ್.ಡಿ.ಎಫ್.ಸಿ ಸಾಮಾನ್ಯ ನಿಧಿ ಖಾತೆ 50100316845801 ರಲ್ಲಿ ಸಂಗ್ರಹವಾಗಿದ್ದ ವಿದ್ಯಾರ್ಥಿಗಳ ಶುಲ್ಕದಲ್ಲಿ ದಿನಾಂಕ 07.04.2021 ರಂದು ರೂ 1,00,00,000/– ಗಳನ್ನು ಹಾಗೂ 29.04.2021 ರಂದು ರೂ 4,00,00,000/–ಗಳನ್ನು ಎಸ್.ಬಿ.ಐ ಸಾಮಾನ್ಯ ನಿಧಿ ಖಾತೆ 54035420117 ಗೆ ವೇತನ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ವರ್ಗಾವಣೆ ಮಾಡಲಾಗಿದೆ. ಸಾಮಾನ್ಯ ನಿಧಿ ಖಾತೆ ಸಂಖ್ಯೆ 50100316845801 ರಿಂದ ರೂ 23,85,300/– ಗಳನ್ನು ಹೆಚ್.ಡಿ.ಎಫ್.ಸಿ ಬ್ಯಾಂಕಿನಲ್ಲಿ ಹೊಸದಾಗಿ ತೆರೆಯಲಾಗಿರುವ ಕರಾಮುವಿ ಸಿಲ್ವರ್ ಜ್ಯುಬಿಲಿ ಖಾತೆ 50100418722508 ಗೆ ವರ್ಗಾವಣೆ ಮಾಡಲಾಗಿದೆ. ವೇತನ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ಹೆಚ್.ಡಿ.ಎಫ್.ಸಿ ಪರೀಕ್ಷಾ ನಿಧಿ ಖಾತೆ 50100320541948 ಯಿಂದ ಎಸ್.ಬಿ.ಐ ಸಾಮಾನ್ಯ ನಿಧಿ ಖಾತೆ 54035420117 ಗೆ ದಿನಾಂಕ 06.08.2021 ರಂದು ಹಾಗೂ ದಿನಾಂಕ 16.08.2021 ರಂದು ಮತ್ತು 27.08.2021 ರಂದು ತಲಾ ರೂ 1,00,00,000/– ರಂತೆ ರೂ 3,00,00,000/–ಗಳನ್ನು ತಾತ್ಕಲಿಕವಾಗಿ ವರ್ಗಾವಣೆ ಮಾಡಲಾಗಿದೆ. ಕರಾಮುವಿ ಹೆಚ್.ಡಿ.ಎಫ್.ಸಿ ಪರೀಕ್ಷಾ ನಿಧಿ ಖಾತೆ 50100320541948 ಯಿಂದ ಎಸ್.ಬಿ.ಐ ಪರೀಕ್ಷಾ ನಿಧಿ ಖಾತೆ 54035420128 ಗೆ ಪರೀಕ್ಷಾ ಚಟುವಟಿಕೆಗಳ ವೆಚ್ಚಕ್ಕಾಗಿ ದಿನಾಂಕ 06.05.2021 ರಂದು ರೂ 25,00,000/ಗಳನ್ನು ವರ್ಗಾವಣೆ ಮಾಡಲಾಗಿದೆ.

<u>ಆಂತರಿಕ ವರ್ಗಾವಣೆ ಮಾಡಿರುವ ವಿವರ</u>

| ಕ್ರಮ ಸಂಖ್ಯೆ | ವರ್ಗಾವಣೆ ಮಾಡಿರುವ ಖಾತೆ | ವರ್ಗಾವಣೆಯಾಗಿರುವ ಖಾತೆ | ದಿನಾಂಕ | ಮೊತ್ತ |
|---|---|---|---|---|
| 1. | ಸಾಮಾನ್ಯ ನಿಧಿ ಖಾತೆ 54035420117 | ಪಿಂಚಣಿ ನಿಧಿ ಖಾತೆ 54035421279 | 01.04.2021 | 12,00,000/– |
| 2. | ಸಾಮಾನ್ಯ ನಿಧಿ ಖಾತೆ 54035420117 | ಪಿಂಚಣಿ ನಿಧಿ ಖಾತೆ 54035421279 | 30.06.2021 | 25,00,000/– |
| 3. | ಸಾಮಾನ್ಯ ನಿಧಿ ಖಾತೆ 54035420117 | ಪಿಂಚಣಿ ನಿಧಿ ಖಾತೆ 54035421279 | 29.09.2021 | 35,00,000/– |
| 4. | ಮುಕ್ತ ಸಂಜೀವಿನಿ ಖಾತೆ64018806640 | ಸಾಮಾನ್ಯ ನಿಧಿ ಖಾತೆ 54035420117 | 04.09.2021 | 2,00,00,000/– |
| 5. | ಹೆಚ್.ಡಿ.ಎಫ್.ಸಿ ಸಾಮಾನ್ಯ ನಿಧಿ ಖಾತೆ 540100316845801 | ಎಸ್.ಬಿ.ಐ ಸಾಮಾನ್ಯ ನಿಧಿ ಖಾತೆ 54035420117 | 07.04.2021 | 1,00,00,000/– |
| 6. | ಹೆಚ್.ಡಿ.ಎಫ್.ಸಿ ಸಾಮಾನ್ಯ ನಿಧಿ ಖಾತೆ 540100316845801 | ಎಸ್.ಬಿ.ಐ ಸಾಮಾನ್ಯ ನಿಧಿ ಖಾತೆ 54035420117 | 29.04.2021 | 4,00,00,000/– |

| | | | | |
|---|---|---|---|---|
| 7. | ಹೆಚ್.ಡಿ.ಎಫ್.ಸಿ ಸಾಮಾನ್ಯ ನಿಧಿ ಖಾತೆ 50100316845801 | ಹೆಚ್.ಡಿ.ಎಫ್.ಸಿ ಸಿಲ್ವರ್ ಜುಬಿಲಿ ಖಾತೆ 50100418722508 | 19.06.2021 | 23,85,300/- |
| 8. | ಹೆಚ್.ಡಿ.ಎಫ್.ಸಿ ಪರೀಕ್ಷಾ ನಿಧಿ ಖಾತೆ 50100320541948 | ಎಸ್.ಬಿ.ಐ ಸಾಮಾನ್ಯ ನಿಧಿ 54035420117 | 06.08.2021 | 1,00,00,000/- |
| 9. | ಹೆಚ್.ಡಿ.ಎಫ್.ಸಿ ಪರೀಕ್ಷಾ ನಿಧಿ ಖಾತೆ 50100320541948 | ಎಸ್.ಬಿ.ಐ ಸಾಮಾನ್ಯ ನಿಧಿ 54035420117 | 16.08.2021 | 1,00,00,000/- |
| 10. | ಹೆಚ್.ಡಿ.ಎಫ್.ಸಿ ಪರೀಕ್ಷಾ ನಿಧಿ ಖಾತೆ 50100320541948 | ಎಸ್.ಬಿ.ಐ ಸಾಮಾನ್ಯ ನಿಧಿ 54035420117 | 27.08.2021 | 1,00,00,000/- |
| 11. | ಹೆಚ್.ಡಿ.ಎಫ್.ಸಿ ಪರೀಕ್ಷಾ ನಿಧಿ ಖಾತೆ 50100320541948 | ಎಸ್.ಬಿ.ಐ ಪರೀಕ್ಷಾ ನಿಧಿ ಖಾತ 54035420128 | 06.05.2021 | 25,00,000/- |

ವಿ.ವಿ.ಯ ನೌಕರರ ವೇತನ, ಪಿಂಚಣಿ ಹಾಗೂ ಇತರೆ ಆಡಳಿತಾತ್ಮಕ ವೆಚ್ಚಗಳಿಗೆ ಕೊರತೆಯಾದ ಮೊಬಲಗನ್ನು ಆಯವ್ಯಯದಲ್ಲಿ ಮೀಸಲಿಟ್ಟ ಮೊತ್ತದಲ್ಲಿ ಮತ್ತು ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ವಿವಿಧ ಖಾತೆಗಳಿಂದ ಆಂತರಿಕ ವರ್ಗಾವಣೆ ಮಾಡಲಾಗಿದೆ. ತಾತ್ಕಾಲಿಕವಾಗಿ ವರ್ಗಾಯಿಸಲಾಗಿರುವ ಮೊಬಲಗನ್ನು ಆರ್ಥಿಕ ವರ್ಷದಲ್ಲಿ ಆಂತರಿಕ ವರ್ಗಾವಣೆ ಮಾಡಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಏಪ್ರಿಲ್-2021 ರಿಂದ ಸಪ್ಟೆಂಬರ್ 2021 ರವರೆಗೆ ವಿವಿಧ ಖಾತೆಗಳಿಗೆ ಆಂತರಿಕ ವರ್ಗಾವಣೆ ಮಾಡಲಾಗಿರುವ ಕ್ರಮಕ್ಕೆ ಹಣಕಾಸು ಸಮಿತಿ ಸಭೆಯ ಅನುಸಮರ್ಥನೆ ಕೋರಿ ವಿಷಯ ಮಂಡಿಸಲಾಗಿದೆ.

ತೀರ್ಮಾನ :

**2021-22 ನೇ ಸಾಲಿನಲ್ಲಿ ಏಪ್ರಿಲ್ 2021 ರಿಂದ ಸೆಪ್ಟೆಂಬರ್ 2021 ವರೆಗೆ ವಿವಿಧ ಖಾತೆಗಳಿಂದ ಆಂತರಿಕ ನಿಧಿ ವರ್ಗಾವಣೆ ವಿ.ವಿ.ಯ ನೌಕರರ ವೇತನ, ಪಿಂಚಣಿ ಹಾಗೂ ಇತರೆ ಆಡಳಿತಾತ್ಮಕ ವೆಚ್ಚಗಳಿಗೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ವಿವಿಧ ಖಾತೆಗಳಿಂದ ಆಂತರಿಕ ವರ್ಗಾವಣೆ ಮಾಡಲಾಗಿದೆ. ಸದರಿ ಕ್ರಮಕ್ಕೆ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.**

**ವಿಷಯ ಸಂಖ್ಯೆ: 83.4**

**ಸೆಪ್ಟೆಂಬರ್-21 ಮಾಹೆಯಲ್ಲಿ ಪಕ್ವಗೊಂಡಿರುವ ಠೇವಣಿಗಳನ್ನು ನವೀಕರಿಸಿರುವ ಮತ್ತು ನಗದೀಕರಿಸಿರುವ ಕ್ರಮಕ್ಕೆ ಹಣಕಾಸು ಸಮಿತಿಯ ಅನುಸಮರ್ಥನೆ ಕೋರುವ ಬಗೆಗೆ.**

ಸೆಪ್ಟೆಂಬರ್-**2021** ಮಾಹೆಯಲ್ಲಿ ಎಸ್.ಬಿ.ಐ ಶಾಖೆಯಲ್ಲಿ ಹೂಡಿಕೆ ಮಾಡಲಾಗಿದ್ದ ಪರೀಕ್ಷಾ ನಿಧಿಯ ಪಕ್ವಗೊಂಡ ಮೂರು (3) ಠೇವಣಿಗಳಲ್ಲಿ ಮೊಬಲಗು ರೂ.3,61,80,025/- ಗಳಾಗಿದ್ದು ಬಡ್ಡಿಯು ಸೇರಿ ರೂ.4,42,91,491/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಪ್ರಸ್ತುತ ವರ್ಷದ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಗರಿಷ್ಠ ಬಡ್ಡಿ ದರದಲ್ಲಿ ಸದರಿ ಬ್ಯಾಂಕಿನಲ್ಲಿ ಪ್ರಸ್ತುತ ಇದ್ದ ಅವಧಿಗೆ ನವೀಕರಿಸಲಾಗಿದೆ.

ಎಸ್.ಬಿ.ಐ ಶಾಖೆಯಲ್ಲಿ ಹೂಡಿಕೆ ಮಾಡಲಾಗಿದ್ದ ಮುಕ್ತ ಸಂಜೀವಿನಿ ನಿಧಿಯ ಪಕ್ವಗೊಂಡ ಮೂರು ಠೇವಣಿಗಳನ್ನು 2021-22 ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ನಿಧಿಗೆ ವರ್ಗಾಯಿಸಲು ಹಂಚಿಕೆ ಮಾಡಲಾಗಿರುವುದರಿಂದ ನಗದೀಕರಿಸಿ ಮುಕ್ತ ಸಂಜೀವಿನಿ ಖಾತೆಗೆ ಜಮೆ ಮಾಡಲಾಗಿದೆ. ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ನಿಧಿಯ ಪಕ್ವಗೊಂಡ ಆರು (6) ಠೇವಣಿಗಳ ಮೊಬಲಗು ರೂ.3,86,45,676/-ಗಳಾಗಿದ್ದು ಬಡ್ಡಿಯು ಸೇರಿ ರೂ.4,08,55,707/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ವೇತನ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ನದೀಕರಿಸಲಾಗಿದೆ.

ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ನಿಧಿ/ಪರೀಕ್ಷಾ ನಿಧಿಯ ಪಕ್ವಗೊಂಡ ಹದಿನಾಲ್ಕು (14) ಠೇವಣಿಗಳ ಮೊಬಲಗು ರೂ.10,75,42,105/-ಗಳಾಗಿದ್ದು ಬಡ್ಡಿಯು

ಸೇರಿ ರೂ. 11,36,92,116/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಕರ್ನಾಟಕ ಗ್ರಾಮೀಣಾ ಬ್ಯಾಂಕ್ ಗರಿಷ್ಠ ಬಡ್ಡಿ ದರದಲ್ಲಿ ಒಂದು ವರ್ಷಕ್ಕೆ ಸದರಿ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ನವೀಕರಿಸಲಾಗಿದೆ. **ಅನುಬಂಧ (6)** ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಕರಾಮುವಿ/ಹವಿ-3/ಠೇವಣಿ ಹೂಡಿಕೆ/13/2017-18 ದಿನಾಂಕ : 16.11.2017. ಸ್ಥಾಯಿ ಆದೇಶದ ಅನುಸಾರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಫೆಬ್ರವರಿ-2021, ಮಾರ್ಚ-2021 ಮತ್ತು ಏಪ್ರಿಲ್-2021 ರಿಂದ ಸೆಪ್ಟೆಂಬರ್-21 ರವರೆಗೆ ಪಕ್ವಗೊಂಡಿರುವ ಠೇವಣಿಗಳನ್ನು ನವೀಕರಿಸಿರುವ/ ನಗದೀಕರಿಸಿರುವ ಮತ್ತು ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಹೂಡಿಕೆ ಮಾಡಿರುವ ಕ್ರಮಕ್ಕೆ ಹಣಕಾಸು ಸಮಿತಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ :**

**ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಕರಾಮುವಿ/ಹವಿ-3/ಠೇವಣಿ ಹೂಡಿಕೆ/13/2017-18 ದಿನಾಂಕ: 16.11.2017 ಸ್ಥಾಯಿ ಆದೇಶದ ಅನುಸಾರ ಸೆಪ್ಟೆಂಬರ್-21 ಮಾಹೆಯಲ್ಲಿ ಪಕ್ವಗೊಂಡಿರುವ ಠೇವಣಿಗಳನ್ನು ನವೀಕರಿಸಿರುವ ಮತ್ತು ನಗದೀಕರಿಸಿರುವ ಮತ್ತು ಹೂಡಿಕೆ ಮಾಡಿರುವ ಕ್ರಮಕ್ಕೆ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.**

**ವಿಷಯ ಸಂಖ್ಯೆ: 83.5**

**ಫೆಬ್ರವರಿ-2021, ಮಾರ್ಚ-2021 ಮತ್ತು ಏಪ್ರಿಲ್-2021 ರಿಂದ ಆಗಸ್ಟ್-21 ರವರೆಗೆ ಪಕ್ವಗೊಂಡಿರುವ ಠೇವಣಿಗಳನ್ನು ನವೀಕರಿಸಿರುವ ಮತ್ತು ನಗದೀಕರಿಸಿರುವ ಹಾಗೂ ಠೇವಣಿ ಹೂಡಿಕೆ ಮಾಡಿರುವ ಕ್ರಮಕ್ಕೆ ಹಣಕಾಸು ಸಮಿತಿಯ ಅನುಸಮರ್ಥನೆ ಕೋರುವ ಬಗೆಗೆ.**

**ಫೆಬ್ರವರಿ-2021 ಮತ್ತು ಮಾರ್ಚ-21** ಮಾಹೆಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ನಿಧಿಯ ನಾಲ್ಕು ಪಕ್ವಗೊಂಡ ಠೇವಣಿಗಳಲ್ಲಿ ಫೆಬ್ರವರಿ 21 ಮಾಹೆಯ ಮೂರು (3) ಠೇವಣಿಗಳ ಮೊಬಲಗು ಬಡ್ಡಿಯು ಸೇರಿ ರೂ. 1.45.48,750/-ಗಳಾಗಿದ್ದು ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ವೇತನ ಮತ್ತು ಇತರೆ ವೆಚ್ಚಗಳಿಗಾಗಿ ನಗದೀಕರಿಸಲಾಗಿದೆ. ಮತ್ತು ಮಾರ್ಚ 21 ಮಾಹೆಯ ಒಂದು ಠೇವಣಿಯ ಮೊಬಲಗು ಬಡ್ಡಿಯು ಸೇರಿ ರೂ 413697/- ಗಳಾಗಿದ್ದು ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ಕರ್ನಾಟಕ ಗ್ರಾಮೀಣಾ ಬ್ಯಾಂಕಿನ ಗರಿಷ್ಠ ಬಡ್ಡಿ ದರದಲ್ಲಿ ಒಂದು ವರ್ಷದ ಅವಧಿಗೆ ನವೀಕರಿಸಲಾಗಿದೆ.

**ಏಪ್ರಿಲ್-2021 ಮತ್ತು ಮೇ-2021** ಮಾಹೆಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ಮತ್ತು ಪರೀಕ್ಷಾ ನಿಧಿಯ ನಲವತ್ತೆಂಟು (48) ಪಕ್ವಗೊಂಡ ಠೇವಣಿಗಳಲ್ಲಿ ಏಪ್ರಿಲ್ ಮಾಹೆಯ ಒಂದು (1) ಠೇವಣಿಯ ಮೊಬಲಗು ರೂ.66,39,050/-ಗಳಾಗಿದ್ದು ಬಡ್ಡಿಯು ಸೇರಿ ರೂ. 73,86,848/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ವೇತನ ಮತ್ತು ಇತರೆ ವೆಚ್ಚಗಳಿಗಾಗಿ ನಗದೀಕರಿಸಲಾಗಿದೆ. **ಮೇ-2021** ಮಾಹೆಯ ಸಾಮಾನ್ಯ ನಿಧಿಯ ಏಳು ಠೇವಣಿಗಳ ಮೊಬಲಗು ರೂ. 5,02,49,082/- ಗಳಾಗಿದ್ದು ಬಡ್ಡಿಯು ಸೇರಿ ರೂ.5,40,51,723/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ವೇತನ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ನಗದೀಕರಿಸಲಾಗಿದೆ ಮತ್ತು ಪರೀಕ್ಷಾ ನಿಧಿಯ ಪಕ್ವಗೊಂಡ ಮೂರು ಠೇವಣಿಗಳ ಮೊಬಲಗು ರೂ.2,51,15,290/-ಗಳಾಗಿದ್ದು ಬಡ್ಡಿಯು ಸೇರಿ ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ಪರೀಕ್ಷಾ ಚಟುವಟಿಕೆಗಳ ವೆಚ್ಚಗಳಿಗಾಗಿ ನಗದೀಕರಿಸಲಾಗಿದೆ. ಸಾಮಾನ್ಯ ನಿಧಿಯ ಹತ್ತೊಂಬತ್ತು (19) ಠೇವಣಿಗಳ ಮೊಬಲಗು ರೂ.18,99,36,232/-ಗಳಾಗಿದ್ದು ಬಡ್ಡಿಯು ಸೇರಿ ರೂ. 20,46,96,148/- ಗಳಾಗಿರುತ್ತದೆ. ಪರೀಕ್ಷಾ ನಿಧಿಯ ಪಕ್ವಗೊಂಡ ಹತ್ತೊಂಬತ್ತು (19) ಠೇವಣಿಗಳ ಮೊಬಲಗು ರೂ. 15,27,50,573/-ಗಳಾಗಿದ್ದು ಬಡ್ಡಿಯು ಸೇರಿ ರೂ. 16,36,75,048/-ಗಳಾಗಿರುತ್ತದೆ. ಪಕ್ವಗೊಂಡ 38 ಠೇವಣಿಗಳ ಮೊಬಲಗಿನಲ್ಲಿ ನಿಯಮಾನುಸಾರ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಕರ್ನಾಟಕ ಗ್ರಾಮೀಣಾ

ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಶೇ 5.50 ಗರಿಷ್ಠ ಬಡ್ಡಿ ದರದಲ್ಲಿ ಒಂದು ವರ್ಷದ ಅವಧಿಗೆ ನವೀಕರಿಸಲಾಗಿದೆ.

ದತ್ತಿ ನಿಧಿಯ ಎಸ್.ಬಿ.ಐ ಕರಾಮುವಿ ಶಾಖೆಯಲ್ಲಿ ಪಕ್ವಗೊಂಡ ಎರಡು (2) ಠೇವಣಿಗಳ ಮೊಬಲಗು ರೂ. 43,95,814/- ಬಡ್ಡಿಯೂ ಸೇರಿ ರೂ. 46,22,188/-ಗಳಾಗಿರುತ್ತದೆ. ದತ್ತಿ ನಿಧಿಯ ಪಕ್ವಗೊಂಡ ಠೇವಣಿಗಳಿಗೆ ಆದಾಯತೆರಿಗೆ ಪಾವತಿಸಿ ಎರಡು ಠೇವಣಿಗಳ ಒಟ್ಟು ಮೊಬಲಗನ್ನು ಎಸ್.ಬಿ.ಐ ಗರಿಷ್ಠ ಬಡ್ಡಿ ದರದಲ್ಲಿ ಒಂದು ವರ್ಷಕ್ಕೆ ಸದರಿ ಬ್ಯಾಂಕಿನಲ್ಲಿ ಒಂದೇ ಠೇವಣಿಯಲ್ಲಿ ನವೀಕರಿಸಲಾಗಿದೆ. ಸಾಮಾನ್ಯ ನಿಧಿ ಖಾತೆಯಿಂದ ಕೆನರಾ ಬ್ಯಾಂಕ್, ವಿವೇಕಾನಂದ ನಗರ, ಮೈಸೂರು ಶಾಖೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ರೂ.2,00,00,000/- (ರೂ ಎರಡು ಕೋಟಿ ಮಾತ್ರ)ಯನ್ನು ತಲಾ ಒಂದು ಕೋಟಿಯಂತೆ ಶೇ 5.20 ಗರಿಷ್ಠ ಬಡ್ಡಿದರದಲ್ಲಿ ಒಂದು ವರ್ಷದ ಅವಧಿಗೆ ಠೇವಣಿ ಹೂಡಿಕೆ ಮಾಡಲಾಗಿದೆ. ಪರೀಕ್ಷಾ ನಿಧಿ ಖಾತೆಯಿಂದ IndusInd bank Ltd ಮೈಸೂರು ಶಾಖೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ರೂ.1,00,00,000/-(ರೂ ಒಂದು ಕೋಟಿ ಮಾತ್ರ)ಯನ್ನು ಶೇ 6.10 ಗರಿಷ್ಠ ಬಡ್ಡಿದರದಲ್ಲಿ ಒಂದು ವರ್ಷ ಒಂದು ದಿನದ ಅವಧಿಗೆ ಠೇವಣಿ ಹೂಡಿಕೆ ಮಾಡಲಾಗಿದೆ.

**ಜೂನ್-2021** ಮಾಹೆಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ನಿಧಿಯ ಪಕ್ವಗೊಂಡ ನಾಲ್ಕು(4) ಠೇವಣಿಗಳ ಮೊಬಲಗು ರೂ. 3,72,90,546/- ಗಳಾಗಿದ್ದು ಬಡ್ಡಿಯು ಸೇರಿ ರೂ.3,95,00,897/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್ ಗರಿಷ್ಠ ಬಡ್ಡಿ ದರ ಶೇ 5.80 ಬಡ್ಡಿ ದರದಲ್ಲಿ ಒಂದು ವರ್ಷಕ್ಕೆ ಸದರಿ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ನವೀಕರಿಸಲಾಗಿದೆ. ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ನಿಧಿಯ ಪಕ್ವಗೊಂಡ ನಾಲ್ಕು(4) ಠೇವಣಿಗಳ ಮೊಬಲಗು ರೂ.3,31,13,762/- ಗಳಾಗಿದ್ದು ಬಡ್ಡಿಯು ಸೇರಿ ರೂ.3,50,76,539/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ವೇತನ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ನಗದೀಕರಿಸಲಾಗಿದೆ. ಎಸ್.ಬಿ.ಐ ಶಾಖೆಯಲ್ಲಿ ಹೂಡಿಕೆ ಮಾಡಲಾಗಿದ್ದ ಸಾಮಾನ್ಯ (ಬಿಎಡ್) ನಿಧಿಯ ಪಕ್ವಗೊಂಡ ಒಂದು (1) ಠೇವಣಿಯ ಮೊಬಲಗು ರೂ.16,86,855/- ಗಳಾಗಿದ್ದು ಬಡ್ಡಿಯು ಸೇರಿ ರೂ.17,74,544/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಪ್ರಸ್ತುತ ವರ್ಷದ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಎಸ್.ಬಿ.ಐ ಗರಿಷ್ಠ ಬಡ್ಡಿ ದರದಲ್ಲಿ ಪ್ರಸ್ತುತ ಇದ್ದ ಅವಧಿಗೆ ಸದರಿ ಬ್ಯಾಂಕಿನಲ್ಲಿ ನವೀಕರಿಸಲಾಗಿದೆ. ಎಸ್.ಬಿ.ಐ ಶಾಖೆಯಲ್ಲಿ ವಿವಿಧ ಏಳು (7) ಪೀಠ ನಿಧಿಗಳ ಪಕ್ವಗೊಂಡ ಠೇವಣಿಗಳ ಮೊಬಲಗು ರೂ.1,11,82,927/-ಗಳಾಗಿದ್ದು ಬಡ್ಡಿಯು ಸೇರಿ ರೂ.11764256/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಎಸ್.ಬಿ.ಐ ಗರಿಷ್ಠ ಬಡ್ಡಿ ದರದಲ್ಲಿ ಒಂದು ವರ್ಷದ ಅವಧಿಗೆ ಸದರಿ ಬ್ಯಾಂಕಿನಲ್ಲಿ ನವೀಕರಿಸಲಾಗಿದೆ.

ಪರೀಕ್ಷಾ ನಿಧಿ ಖಾತೆಯಿಂದ IndusInd bank Ltd ಮೈಸೂರು ಶಾಖೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ರೂ.1,00,00,000/-(ರೂ ಒಂದು ಕೋಟಿ ಮಾತ್ರ)ಯನ್ನು ಶೇ 6.35 ಗರಿಷ್ಠ ಬಡ್ಡಿದರದಲ್ಲಿ ಎರಡು ವರ್ಷ ಅವಧಿಗೆ ಠೇವಣಿ ಹೂಡಿಕೆ ಮಾಡಲಾಗಿದೆ. ಪರೀಕ್ಷಾ ನಿಧಿ ಖಾತೆಯಿಂದ Karnataka Bank Main Branch ಮೈಸೂರು ಶಾಖೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ರೂ.1,00,00,000/-(ರೂ ಒಂದು ಕೋಟಿ ಮಾತ್ರ)ಯನ್ನು ಶೇ 5.20 ಗರಿಷ್ಠ ಬಡ್ಡಿದರದಲ್ಲಿ ಒಂದು ವರ್ಷದ ಅವಧಿಗೆ ಠೇವಣಿ ಹೂಡಿಕೆ ಮಾಡಲಾಗಿದೆ.

**ಜುಲೈ-2021** ಮಾಹೆಯಲ್ಲಿ ಎಸ್.ಬಿ.ಐ ಶಾಖೆಯಲ್ಲಿ ಹೂಡಿಕೆ ಮಾಡಲಾಗಿದ್ದ ಹನ್ನೆರಡು (12) ಠೇವಣಿಗಳಲ್ಲಿ ಪರೀಕ್ಷಾ ನಿಧಿಯ ಪಕ್ವಗೊಂಡ ಒಂದು (1) ಠೇವಣಿಯ ಮೊಬಲಗು ರೂ.66,07,729/- ಗಳಾಗಿದ್ದು ಬಡ್ಡಿಯು ಸೇರಿ ರೂ.80,89,164/-ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಪ್ರಸ್ತುತ ವರ್ಷದ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಶೇ 5.30 ಬಡ್ಡಿ ದರದಲ್ಲಿ ಪ್ರಸ್ತುತ ಇದ್ದ ಅವಧಿಗೆ ನವೀಕರಿಸಲಾಗಿದೆ ಮತ್ತು ಎಸ್.ಬಿ.ಐ ಶಾಖೆಯಲ್ಲಿ ಹೂಡಿಕೆ ಮಾಡಲಾಗಿದ್ದ ಕಾರ್ಪಸ್ ನಿಧಿಯ ಪಕ್ವಗೊಂಡ ಹನ್ನೊಂದು (11) ಠೇವಣಿಗಳಿಗೆ ನಿಯಮಾನುಸಾರ ಆದಾಯತೆರಿಗೆ ಪಾವತಿಸಿ ಉಳಿದ ಬಡ್ಡಿಯ ಮೊಬಲಗನ್ನು ವೇತನ ವೆಚ್ಚಕ್ಕಾಗಿ ಹಿಂಪಡೆದು ಠೇವಣಿಗಳ ಅಸಲನ್ನು ಎಸ್.ಬಿ.ಐ ಗರಿಷ್ಠ ದರದಲ್ಲಿ ಪ್ರಸ್ತುತ ಇದ್ದ ಅವಧಿಗೆ ಸದರಿ ಬ್ಯಾಂಕಿನಲ್ಲಿ ನವೀಕರಿಸಲಾಗಿದೆ.

ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ನಿಧಿಯ ಪಕ್ವಗೊಂಡ ಐದು (5) ಠೇವಣಿಗಳ ಮೊಬಲಗು ರೂ.3,67,63,578/–ಗಳಾಗಿದ್ದು ಬಡ್ಡಿಯು ಸೇರಿ ರೂ.3,89,42,693/–ಗಳಾಗಿರುತ್ತದೆ. ಪಕ್ವಗೊಂಡ ಠೇವಣಿಗಳನ್ನು ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಗರಿಷ್ಠ ಬಡ್ಡಿದರ ಶೇ 5.40 ದರದಲ್ಲಿ ಒಂದು ವರ್ಷಕ್ಕೆ ಸದರಿ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ನವೀಕರಿಸಲಾಗಿದೆ ಮತ್ತು ಸಾಮಾನ್ಯ ನಿಧಿಯ ಪಕ್ವಗೊಂಡ ನಾಲ್ಕು (4) ಠೇವಣಿಗಳ ಮೊಬಲಗು ರೂ.3,16,39,026/–ಗಳಾಗಿದ್ದು ಬಡ್ಡಿಯು ಸೇರಿ ರೂ.3,35,14,389/–ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ವೇತನ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ನಗದೀಕರಿಸಲಾಗಿದೆ.

**ಆಗಸ್ಟ್–2021** ಮಾಹೆಯಲ್ಲಿ ಎಸ್.ಬಿ.ಐ ಶಾಖೆಯಲ್ಲಿ ಹೂಡಿಕೆ ಮಾಡಲಾಗಿದ್ದ ಪರೀಕ್ಷಾ ನಿಧಿಯ ಪಕ್ವಗೊಂಡ ಒಂದು (1) ಠೇವಣಿಯ ಮೊಬಲಗು ರೂ.84,45,599/– ಗಳಾಗಿದ್ದು ಬಡ್ಡಿಯು ಸೇರಿ ರೂ.88,84,632/–ಗಳಾಗಿರುತ್ತದೆ. ಒಟ್ಟು ಮೊತ್ತದಲ್ಲಿ ಪ್ರಸ್ತುತ ವರ್ಷದ ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಗರಿಷ್ಠ ಬಡ್ಡಿ ದರದಲ್ಲಿ ಸದರಿ ಬ್ಯಾಂಕಿನಲ್ಲಿ 1 ವರ್ಷದ ಅವಧಿಗೆ ನವೀಕರಿಸಲಾಗಿದೆ.

ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ (ಕೆ.ಜಿ.ಬಿ) ಹೂಡಿಕೆ ಮಾಡಲಾಗಿದ್ದ ಸಾಮಾನ್ಯ ನಿಧಿಯ ಪಕ್ವಗೊಂಡ ಮೂರು (3) ಠೇವಣಿಗಳ ಮೊಬಲಗು ರೂ.2,14,39,934/–ಗಳಾಗಿದ್ದು ಬಡ್ಡಿಯು ಸೇರಿ ರೂ.2,26,66,019/–ಗಳಾಗಿರುತ್ತದೆ. ಸಾಮಾನ್ಯ ನಿಧಿಯ ಪಕ್ವಗೊಂಡ ಮೂರು ಠೇವಣಿಗಳ ಒಟ್ಟು ಮೊತ್ತದಲ್ಲಿ ಆದಾಯತೆರಿಗೆ ಪಾವತಿಸಿ ಉಳಿದ ಅಸಲು ಮತ್ತು ಬಡ್ಡಿ ಮೊಬಲಗನ್ನು ವೇತನ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ನದೀಕರಿಸಲಾಗಿದೆ ಮತ್ತು ಸಾಮಾನ್ಯ ನಿಧಿಯ ಪಕ್ವಗೊಂಡ ಆರು (6) ಠೇವಣಿಗಳ ಮೊಬಲಗು ರೂ.4,31,43,235/–ಗಳಾಗಿದ್ದು ಬಡ್ಡಿಯು ಸೇರಿ ರೂ.4,56,10,467/– ಗಳಾಗಿರುತ್ತದೆ. ಸಾಮಾನ್ಯ ನಿಧಿಯ ಪಕ್ವಗೊಂಡ ಠೇವಣಿಗಳನ್ನು ಆದಾಯತೆರಿಗೆ ಪಾವತಿಸಿ ಉಳಿದ ಮೊಬಲಗನ್ನು ಕರ್ನಾಟಕ ಗ್ರಾಮೀಣಾ ಬ್ಯಾಂಕ್ ಗರಿಷ್ಠ ಬಡ್ಡಿ ದರದಲ್ಲಿ ಒಂದು ವರ್ಷಕ್ಕೆ ಸದರಿ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ನವೀಕರಿಸಲಾಗಿದೆ.

ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮೈಸೂರು ಶಾಖೆಯಲ್ಲಿ ಪರೀಕ್ಷಾ ನಿಧಿಯ ಪಕ್ವಗೊಂಡ ಒಂದು ಠೇವಣಿಯ ಮೊತ್ತ ರೂ 1,00,00,000/– ಗಳಾಗಿದ್ದು ಬಡ್ಡಿಯೂ ಸೇರಿದಂತೆ ರೂ 10747067/–ಗಳಲ್ಲಿ ಆದಾಯತೆರಿಗೆ ಪಾವತಿಸಿ ಬಡ್ಡಿಯ ಮೊಬಲಗನ್ನು ಹಿಂಪಡೆದು ಅಸಲನ್ನು ಸದರಿ ಬ್ಯಾಂಕ್ ಗರಿಷ್ಠ ಬಡ್ಡಿ ದರದಲ್ಲಿ ಒಂದು ವರ್ಷ ಒಂದು ದಿನದ ಅವಧಿಗೆ ಸದರಿ ಬ್ಯಾಂಕಿನಲ್ಲಿ ನವೀಕರಿಸಲಾಗಿದೆ.

ತೀರ್ಮಾನ :

**ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಕರಾಮುವಿ/ಹವಿ–3/ಠೇವಣಿ ಹೂಡಿಕೆ/13/2017–18 ದಿನಾಂಕ: 16.11.2017 ಸ್ಥಾಯಿ ಆದೇಶದ ಅನುಸಾರ ಫೆಬ್ರವರಿ–2021, ಮಾರ್ಚಿ–2021 ಮತ್ತು ಏಪ್ರಿಲ್–2021 ರಿಂದ ಆಗಸ್ಟ್–21 ರವರೆಗೆ ಪಕ್ವಗೊಂಡಿರುವ ಠೇವಣಿಗಳನ್ನು ನವೀಕರಿಸಿರುವ ಮತ್ತು ನಗದೀಕರಿಸಿರುವ ಮತ್ತು ಹೂಡಿಕೆ ಮಾಡಿರುವ ಕ್ರಮಕ್ಕೆ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.**

**ವಿಷಯ ಸಂಖ್ಯೆ: 83.6**

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ವಿವಿಧ ಭತ್ಯೆಗಳನ್ನು ನಿಗದಿಪಡಿಸುವ ಸಂಬಂಧ ಪರಿನಿಯಮಗಳನ್ನು ಸಿದ್ಧಪಡಿಸಿರುವ ಬಗ್ಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಇದುವರೆವಿಗೂ ವಿ.ವಿ.ಯ ಅನೇಕ ಕೇಂದ್ರಗಳಲ್ಲಿ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಇದರಲ್ಲಿ ಭಾಗವಹಿಸುವ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ ನೀಡುತ್ತಿದ್ದ ವಿವಿಧ ಭತ್ಯೆಗಳು ಆಡಿಟ್ ಆಕ್ಷೇಪಣೆಯಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು ದಿನಾಂಕ: 05–03–2021 ರಂದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿರುತ್ತಾರೆ. ಈ ವಿಷಯವಾಗಿ ಸಮಿತಿಯು ದಿನಾಂಕ: 18–06–2021 ರಂದು ಸಭೆ ಸೇರಿ, ಸಮಿತಿಯ ಸದಸ್ಯರುಗಳ ಒಮ್ಮತದಿಂದ ಶೈಕ್ಷಣಿಕ ಕಾರ್ಯಗಳನ್ನು

ಕುರಿತಾದ ಬಗ್ಗೆ "Statute Governing Conduct of Delivery of Academic Programmes" ಎಂಬ ಶೀರ್ಷಿಕೆಯಲ್ಲಿ ಹಾಗು ಪರೀಕ್ಷಾ ಕಾರ್ಯಗಳನ್ನು ಕುರಿತಾದ ಬಗ್ಗೆ "Statute Governing Conduct of Examination" ಎಂಬ ಶೀರ್ಷಿಕೆಯಲ್ಲಿ ಪರಿನಿಯಮಗಳನ್ನು ರಚಿಸಿ ನಿಯಮದಂತೆ ಶೈಕ್ಷಣಿಕ ಮಂಡಳಿ, ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದ ನಂತರ ಸರ್ಕಾರದ ಮುಖಾಂತರ ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರುಗಳು ಪರಿಶೀಲಿಸಿ ಸಲ್ಲಿಸಿರುವ ಎರಡು ಪರಿನಿಯಮಗಳನ್ನು ಶೈಕ್ಷಣಿಕ ಮಂಡಳಿಯ ಮುಂದೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿ, ಮಂಡಳಿಯು ಸದರಿ ಪರಿನಿಯಮಗಳನ್ನು ಒಪ್ಪಲಾಯಿತು. ಸದರಿ ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ಒಪ್ಪಲಾಯಿತು. ಈ ಸಂಬಂಧ ಹಣಕಾಸು ಸಮಿತಿಯ ಅನುಮೋದನೆಗಾಗಿ ಕಡತ ಮಂಡಿಸಿದೆ.

ತೀರ್ಮಾನ :

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ವಿವಿಧ ಭತ್ಯೆಗಳನ್ನು ನಿಗದಿಪಡಿಸುವ ಸಂಬಂಧ ಪರಿನಿಯಮಗಳನ್ನು "Statute Governing Conduct of Delivery of Academic Programmes" ಎಂಬ ಶೀರ್ಷಿಕೆಯಲ್ಲಿ ಹಾಗು ಪರೀಕ್ಷಾ ಕಾರ್ಯಗಳನ್ನು ಕುರಿತಾದ ಬಗ್ಗೆ "Statute Governing Conduct of Examination" ಎಂಬ ಶೀರ್ಷಿಕೆಯಲ್ಲಿ ಪರಿನಿಯಮಗಳನ್ನು ರಚಿಸಿರುವ ಬಗ್ಗೆ ಚರ್ಚಿಸಿ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 83.7

**ವಿಶ್ವವಿದ್ಯಾನಿಲಯದ ವಿವಿಧ ಪದವಿಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ.**

ವಿಶ್ವವಿದ್ಯಾನಿಲಯವು ನಡೆಸುವ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳನ್ನು ಈ ಹಿಂದೆ 2015ನೇ ಸಾಲಿನಲ್ಲಿ ಪರಿಷ್ಕರಿಸಿ ಜಾರಿಗೆ ತರಲಾಗಿತ್ತು. ನಂತರದಲ್ಲಿ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳಲ್ಲಿ ಯಾವುದೇ ಪರಿಷ್ಕರಣೆ ಮಾಡಿರುವುದಿಲ್ಲ. ಈ ಸಂಬಂಧ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಿಸುವ ಸಂಬಂಧವಾಗಿ ಕುಲಸಚಿವರು (ಪರೀಕ್ಷಾಂಗ) ರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಯವರು ದಿನಾಂಕ: 17.06.2021 ರಂದು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಐದು ಸದಸ್ಯರ ತಂಡವನ್ನು ರಚಿಸಲಾಗಿತ್ತು. ಸದರಿ ಪರೀಕ್ಷಾ ಶುಲ್ಕ ಪರಿಷ್ಕರಣಾ ಸಮಿತಿಯು ಸಭೆ ಸೇರಿ 2015ನೇ ಸಾಲಿನಲ್ಲಿ ಪರಿಷ್ಕರಿಸಿರುವ ವಿಶ್ವವಿದ್ಯಾನಿಲಯದ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಶೇಕಡ 25% ರಷ್ಟು ಹೆಚ್ಚಳ ಮಾಡಿ ಪ್ರಸ್ತುತ ನಡೆಸುವ ಪರೀಕ್ಷೆಗಳಿಂದ ಜಾರಿಗೆ ತರಲು ವರದಿ ನೀಡಿದ್ದು, ಸದರಿ ವರದಿಯನುಸಾರ ಕ್ರಮವಹಿಸುವ ಸಂಬಂಧದ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿ, ವಿಶ್ವವಿದ್ಯಾನಿಲಯದ ವಿವಿಧ ಪದವಿಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸಲು ಒಪ್ಪಲಾಯಿತು. ನಾಲ್ಕನೇ ಸೆಮಿಸ್ಟರ್‌ನಲ್ಲಿ ನಡೆಸುವಂತ ಪ್ರಾಜೆಕ್ಟ್, ವೈವಾ ಕಾರ್ಯಕ್ರಮಗಳಿಗೆ, ಮೂರನೇ ಸೆಮಿಸ್ಟರ್‌ಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕಕ್ಕಿಂತ ರೂ.200/- ಗಳನ್ನು ಹೆಚ್ಚುವರಿಯಾಗಿ ನಿಗದಿಪಡಿಸಲು ತೀರ್ಮಾನಿಸಲಾಯಿತು. ಈ ಸಂಬಂಧ ಹಣಕಾಸು ಸಮಿತಿಗೆ ಅನುಮೋದನೆಗೆ ವಿಷಯ ಮಂಡಿಸಿದೆ.

ತೀರ್ಮಾನ :

**ಪರೀಕ್ಷಾ ಶುಲ್ಕ ಪರಿಷ್ಕರಣಾ ಸಮಿತಿಯು ಸಭೆ ಸೇರಿ 2015ನೇ ಸಾಲಿನಲ್ಲಿ ಪರಿಷ್ಕರಿಸಿರುವ ವಿಶ್ವವಿದ್ಯಾನಿಲಯದ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಶೇಕಡ 25% ರಷ್ಟು ಹೆಚ್ಚಳ ಮಾಡಿ ಪ್ರಸ್ತುತ ನಡೆಸುವ ಪರೀಕ್ಷೆಗಳಿಂದ ಜಾರಿಗೆ ತರಲು ಮಂಡಿಸಿರುವ ಪ್ರಸ್ತಾವನೆಗೆ ಹಣಕಾಸು ಸಮಿತಿಯು ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 83.8

**2020–21ನೇ ಸಾಲಿನ January Cycle (February-March) ನ ಆವೃತ್ತಿಯಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ Certificate in Information Communication Technology (CICT) ಕೋರ್ಸ್‌ಗೆ ಪ್ರವೇಶಾತಿ ಶುಲ್ಕ ನಿಗದಿಪಡಿಸಿರುವ ಬಗ್ಗೆ.**

2020–21ನೇ ಸಾಲಿನ January Cycle (February-March) ನ ಆವೃತ್ತಿಯಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ Certificate in Information Communication Technology (CICT) ಕೋರ್ಸ್‌ಗೆ ಪ್ರವೇಶಾತಿ ಶುಲ್ಕ ರೂ.3,000/– ಗಳು ಮತ್ತು ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಬೆಳ್ಳಿ ಹಬ್ಬದ ವಿಶೇಷ ಶುಲ್ಕ ರೂ.300/– ಗಳು ಸೇರಿದಂತೆ ಒಟ್ಟು ರೂ.3,300/– ಗಳನ್ನು ನಿಗದಿಪಡಿಸಿ ವಿದ್ಯಾರ್ಥಿಗಳಿಂದ ಪಡೆಯಲು ಕ್ರಮವಹಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಮುಂದೆ ಅನುಸಮರ್ಥನೆ ಕೋರಿ ವಿಷಯ ಮಂಡಿಸಿ, ಸದರಿ ವಿಷಯಕ್ಕೆ ಅನುಸಮರ್ಥನೆ ನೀಡಿದ್ದು, ಹಣಕಾಸು ಸಮಿತಿಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

ತೀರ್ಮಾನ :

**2020–21ನೇ ಸಾಲಿನ January Cycle (February-March) ನ ಆವೃತ್ತಿಯಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ Certificate in Information Communication Technology (CICT) ಕೋರ್ಸ್‌ಗೆ ಪ್ರವೇಶಾತಿ ಶುಲ್ಕ ರೂ.3,000/– ಗಳು ಮತ್ತು ಬೆಳ್ಳಿ ಹಬ್ಬದ ವಿಶೇಷ ಶುಲ್ಕ ರೂ.300/– ಗಳು ಸೇರಿದಂತೆ ಒಟ್ಟು ರೂ.3,300/– ಗಳನ್ನು ನಿಗದಿಪಡಿಸಿ ವಿದ್ಯಾರ್ಥಿಗಳಿಂದ ಪಡೆಯಲು ಕ್ರಮವಹಿಸಲಾಗಿರುವ ಕ್ರಮಕ್ಕೆ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.**

ವಿಷಯ ಸಂಖ್ಯೆ: 83.9

**ವಿಶ್ವವಿದ್ಯಾನಿಲಯದ ಪರೀಕ್ಷಾ ದಾಖಲಾತಿ ವಿಭಾಗದಲ್ಲಿನ 2008–09, 2015–16 ಮತ್ತು 2016–17ನೇ ಸಾಲಿನ ಓ.ಎಂ.ಆರ್ ಹಾಳೆಗಳನ್ನು Scan ಮಾಡಿ Digital format ಗೆ ಮಾರ್ಪಡಿಸಿ Indexing ನಿರ್ವಹಿಸಿ Server ಗೆ ಅಳವಡಿಸಿರುವ ಕಾರ್ಯಕ್ಕೆ ಮೆ.ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರಿಗೆ ಪಾವತಿಸಿರುವ ಕ್ರಮಕ್ಕೆ ಅನುಸಮರ್ಥನೆ ಪಡೆಯುವ ಬಗ್ಗೆ.**

ವಿಶ್ವವಿದ್ಯಾನಿಲಯದ ಪರೀಕ್ಷಾ ದಾಖಲಾತಿ ವಿಭಾಗದಲ್ಲಿನ 2008–09, 2015–16 ಮತ್ತು 2016–17ನೇ ಸಾಲಿನ ಓ.ಎಂ.ಆರ್ ಹಾಳೆಗಳನ್ನು Scan ಮಾಡಿ Digital formatಗೆ ಮಾರ್ಪಡಿಸಿ Indexing ನಿರ್ವಹಿಸಿ Server ಗೆ ಅಳವಡಿಸುವ ಕಾರ್ಯವನ್ನು ನಿರ್ವಹಿಸುವ ಸಂಬಂಧ ಕಾರ್ಯಾದೇಶ ಸಂಖ್ಯೆ: ಕರಾಮುವಿ/ಸಿದ್ಧಪಾಠ ಮತ್ತು ಪರೀಕ್ಷಾ ದಾಖಲಾತಿ ಗಣಕೀಕರಿಸುವ ಬಗ್ಗೆ/2019, ದಿನಾಂಕ:17.12.2019ರ ಆದೇಶದಲ್ಲಿ ನಿಗದಿಪಡಿಸಿರುವ ದರದ ಪ್ರಕಾರ ಕಾರ್ಯನಿರ್ವಹಿಸಲು (ಪ್ರತಿ ಲಗತ್ತಿಸಿದೆ) ಹಣಕಾಸು ಸಮಿತಿ ಮತ್ತು ವ್ಯವಸ್ಥಾಪನ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಮೆ.ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರಿಗೆ ದಿನಾಂಕ:18.03.2021 ರಂದು ಕಚೇರಿ ಆದೇಶ ನೀಡಲಾಗಿತ್ತು (ಪ್ರತಿ ಲಗತ್ತಿಸಿದೆ). ಅದರಂತೆ, ಮೆ.ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರು ಸದರಿ ಕಾರ್ಯವನ್ನು ನಿರ್ವಹಿಸಿರುವ ಸಂಬಂಧದ ಹುಂಡಿ ಬಾಬ್ತು ರೂ.18,44,272/–(ಹದಿನೆಂಟು ಲಕ್ಷದ ನಲವತ್ತು ನಾಲ್ಕು ಸಾವಿರದ ಎರಡುನೂರ ಎಪ್ಪತ್ತೆರಡು)ಗಳನ್ನು ಪಾವತಿಸುವಂತೆ ಅಗತ್ಯ ವೋಚರ್‌ಗಳೊಂದಿಗೆ ಹುಂಡಿ ಸಲ್ಲಿಸಿದ್ದರು, ಸದರಿ ಮೊತ್ತ ರೂ.18,44,272/–ಗಳನ್ನು ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಮೆ.ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರಿಗೆ ಪಾವತಿಸಲಾಗಿರುವ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಗೆ ಹಣಕಾಸು ಸಮಿತಿಯ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ :

ಮೆ.ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ರವರು ವಿಶ್ವವಿದ್ಯಾನಿಲಯದ ಪರೀಕ್ಷಾ ದಾಖಲಾತಿ ವಿಭಾಗದಲ್ಲಿನ 2008–09, 2015–16 ಮತ್ತು 2016–17ನೇ ಸಾಲಿನ ಓ.ಎಂ.ಆರ್ ಹಾಳೆಗಳನ್ನು Scan ಮಾಡಿ Digital formatಗೆ ಮಾರ್ಪಡಿಸಿ Indexing ನಿರ್ವಹಿಸಿ Server ಗೆ ಅಳವಡಿಸುವ ಕಾರ್ಯವನ್ನು ನಿರ್ವಹಿಸಿದ್ದು, ಸದರಿ ಕಾರ್ಯವನ್ನು ನಿರ್ವಹಿಸಿರುವ ಹುಂಡಿ ಬಾಬ್ತು ರೂ.18,44,272/– (ಹದಿನೆಂಟು ಲಕ್ಷದ ನಲವತ್ತು ನಾಲ್ಕು ಸಾವಿರದ ಎರಡುನೂರ ಎಪ್ಪತ್ತೆರಡು) ಗಳನ್ನು ಪಾವತಿಸಿರುವ ಕ್ರಮಕ್ಕೆ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.

ವಿಷಯ ಸಂಖ್ಯೆ: 83.10

ಕ.ರಾ.ಮು.ವಿ.ಯ ಎಲ್ಲಾ ವಿಭಾಗಗಳ ಅಧ್ಯಯನ ಮಂಡಳಿಯ ಸಭೆಗೆ ಹಾಜರಾಗುವ ಸದಸ್ಯರುಗಳು/ ವಿಶೇಷ ಆಹ್ವಾನಿತರಿಗೆ ಸಂಭಾವನೆ/ ಭತ್ಯೆಯನ್ನು ಪರಿಷ್ಕರಿಸಿರುವ ಅನುಮೋದನೆ ಕೋರಿರುವ ಬಗ್ಗೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸುಗಳ/ ವಿಷಯಗಳ ಅಧ್ಯಯನ ಮಂಡಳಿ ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಸಂಭಾವನೆ/ ಭತ್ಯೆ ಪಾವತಿಸಲು ಆದೇಶ ಹೊರಡಿಸಲಾಗಿತ್ತು. ಸದರಿ ದರಗಳನ್ನು ಪರಿಷ್ಕರಿಸುವ ಸಂಬಂಧ ವಿಶೇಷ ಶೈಕಣಿಕ ಮಂಡಳಿ ಮತ್ತು ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದು ಹಣಕಾಸು ಸಮಿತಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿಶೇಷ ಆಹ್ವಾನಿತರನ್ನೊಳಗೊಂಡಂತೆ, ಈ ಕೆಳಕಂಡಂತೆ ಪರಿಷ್ಕರಿಸಿ ಕಚೇರಿ ಆದೇಶ ಹೊರಡಿಸಲಾಗಿದ್ದು (ಪ್ರತಿ ಲಗತ್ತಿಸಿದೆ) ಸದರಿ ವಿಷಯವನ್ನ ಹಣಕಾಸು ಸಮಿತಿ ಸಭೆಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

| ಕ್ರ. ಸಂ. | ವಿವರ | ದರ (ರೂ.) |
|---|---|---|
| 1 | ಸಭಾ ಭತ್ಯೆ (ಅಧ್ಯಯನ ಮಂಡಳಿ ಅಧ್ಯಕ್ಷರು/ ಆಂತರಿಕ/ ಬಾಹ್ಯ ಮತ್ತು ವಿಶೇಷ ಆಹ್ವಾನಿತ ಸದಸ್ಯರುಗಳು) | 700=00 |
| 2 | ಸ್ಥಳೀಯ ಭತ್ಯೆ (ಮೈಸೂರಿನ ಬಾಹ್ಯ/ ವಿಶೇಷ ಆಹ್ವಾನಿತ ಸದಸ್ಯರುಗಳಿಗೆ) | 300=00 |
| 3 | ದಿನ ಭತ್ಯೆ (ಇತರೆ ಬಾಹ್ಯ/ ವಿಶೇಷ ಆಹ್ವಾನಿತ ಸದಸ್ಯರುಗಳಿಗೆ) | 700=00 |
| 4 | ಪ್ರಯಾಣ ಭತ್ಯೆ | 6/– ರೂ. 1 ಕಿ.ಮಿ. |
| 5 | ಉಪಹಾರ ಭತ್ಯೆ (ಪ್ರತಿ ಸದಸ್ಯರಿಗೆ ಪ್ರತಿ ದಿನಕ್ಕೆ) (ಅಧ್ಯಯನ ಮಂಡಳಿಯ ಅಧ್ಯಕ್ಷರಿಗೆ ಪಾವತಿಸುವುದು) | 200=00 |

ತೀರ್ಮಾನ :

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸುಗಳ/ ವಿಷಯಗಳ ಅಧ್ಯಯನ ಮಂಡಳಿ ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಸಂಭಾವನೆ/ ಭತ್ಯೆ ದರಗಳನ್ನು ಪರಿಷ್ಕರಿಸಿ ಪಾವತಿಸಲು ವಿಶೇಷ ಶೈಕ್ಷಣಿಕ ಮಂಡಳಿ ಮತ್ತು ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ದರಗಳನ್ನು ನಿಗದಿಪಡಿಸಿರುವ ಕ್ರಮಕ್ಕೆ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.

ವಿಷಯ ಸಂಖ್ಯೆ: 83.11

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು (Skill Development Programmes) ಅಳವಡಿಸಿಕೊಳ್ಳುವ ಬಗೆಗೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು (Skill Development Programmes) ಅಳವಡಿಸಿಕೊಳ್ಳುವ ಸಂಬಂಧ ಅಧ್ಯಾದೇಶದ ಕರಡನ್ನು (Ordinance) ಸಿದ್ಧಪಡಿಸಲಾಗಿದ್ದು, (ಪ್ರತಿ ಲಗತ್ತಿಸಿದೆ.) ಸದರಿ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯ ದಿನಾಂಕ: 26–12–2019 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 53ನೇ ಶೈಕ್ಷಣಿಕ ಮಂಡಳಿ ಸಾಮನ್ಯ

ಸಭೆಯಲ್ಲಿ NSDCಯ ಪಟ್ಟಿಯಲ್ಲಿರುವ 2221 ಕೋರ್ಸ್‌ಗಳನ್ನು ಆರಂಭಿಸಲು ರಚಿಸಿರುವ ಅಧ್ಯಾದೇಶಗಳನ್ನು ಅನುಮೋದಿಸಲಾಯಿತು. ಸದರಿ ವಿಷಯವನ್ನು ಹಣಕಾಸು ಸಮಿತಿ ಮುಂದೆ ಮಂಡಿಸಿ ಅನುಮೋದನೆ ಪಡೆಯುವ ವಿಷಯ ಮಂಡಿಸಲಾಗಿದೆ.

ತೀರ್ಮಾನ :

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು (Skill Development Programmes) ಅಳವಡಿಸಿಕೊಳ್ಳುವ ಸಂಬಂಧ ಅಧ್ಯಾದೇಶದ ಕರಡು ಪ್ರಸ್ತಾವನೆಗೆ (Ordinance) ಹಣಕಾಸು ಸಮಿತಿಯು ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 83.12

**ವಿಶ್ವ ವಿದ್ಯಾನಿಲಯ ಕೇಂದ್ರ ಕಛೇರಿಯ ಕ್ಯಾಂಪಸ್‌ಗೆ Wi-fi ಸೌಲಭ್ಯವನ್ನು ಪಡೆಯುವ ಬಗೆಗೆ.**

ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಅಳವಡಿಸಿ Campus ಗೆ wi-fi ಸೌಲಭ್ಯವನ್ನು ಪಡೆಯುವ ಬಗ್ಗೆ ಉದ್ದೇಶಿಸಿ ಮಾನ್ಯ ಕುಲಪತಿಗಳ ನಿರ್ದೇಶನದಂತೆ ಸರ್ಕಾರಿ ಸೌಮ್ಯದ ಸಂಸ್ಥೆಯಾದ ಮೆ. ಕಿಯೋನಿಕ್ಸ್, ಬೆಂಗಳೂರು, ರವರಿಂದ ಉದ್ದೇಶಿತ ಕಾರ್ಯಕ್ಕೆ ತಗಲುವ ಮೊತ್ತ ಹಾಗೂ ವಿವರವನ್ನು ಸಲ್ಲಿಸುವಂತೆ ಕೋರಲಾಗಿ ಸದರಿ ಸಂಸ್ಥೆಯವರು ರೂ.5,95,00,000/- (ರೂ. ಐದು ಕೋಟಿ ತೊಂಭತ್ತೈದು ಲಕ್ಷ ಮಾತ್ರ)ಗಳ Bill of Material ಹಾಗೂ Detail Project Report ಅನ್ನು ಸಲ್ಲಿಸಿದ್ದು, ಸದರಿ ವಿಷಯವನ್ನು 165ನೇ ಸಾಮಾನ್ಯ ಸಭೆ ಹಾಗೂ 54ನೇ ವಿಶೇಷ ಸಭೆಗಳಿಗೆ ವಿಷಯ ಮಂಡಿಸಲಾಗಿ ಸಭೆಯು ರೂ.5,95,00,000/- ಗಳ ದರದಲ್ಲಿ ಉದ್ದೇಶಿತ ಕಾರ್ಯವನ್ನು ನಿರ್ವಹಿಸಲು ಅನುಮೋದನೆ ನೀಡಿರುತ್ತದೆ. ಅದರಂತೆ, ಸದರಿ ಕಾರ್ಯಕ್ಕಾಗಿ ನಿಯಮಾನುಸಾರ ಹಾಗೂ 54ನೇ ಮಾನ್ಯ ವ್ಯವಸ್ಥಾಪನಾ ಮಂಡಳಿ ವಿಶೇಷ ಸಭೆಯ ತೀರ್ಮಾನದಂತೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. 2021-22ನೇ ಆಯವ್ಯಯದ "029-360" Campus Networking and IT Infrastructure to connect main campus / Regional centers" ರಲ್ಲಿ ರೂ.3,00,00,000/- (ರೂ. ಮೂರು ಕೋಟಿ ಮಾತ್ರ) ಗಳನ್ನು ಹಂಚಿಕೆಯಾಗಿರುತ್ತದೆ.

ಮೇಲಿನ ಉದ್ದೇಶಿತ ಕಾರ್ಯ ಹಾಗೂ ಇತರೆ ಕಾರ್ಯಕ್ಕಾಗಿ ರೂ.6,20,00,000/- (ರೂ. ಆರು ಕೋಟಿ ಇಪ್ಪತ್ತು ಲಕ್ಷ ಮಾತ್ರ)ಗಳು ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ 2021-22ನೇ ಆಯವ್ಯಯದ "029-360" ನಿಧಿಗೆ ಹೆಚ್ಚುವರಿಯಾಗಿ ರೂ.3,20,00,000/- (ರೂ. ಮೂರು ಕೋಟಿ ಇಪ್ಪತ್ತು ಲಕ್ಷ ಮಾತ್ರ) ಗಳನ್ನು ಮರು ಹಂಚಿಕೆ ಮಾಡುವ ಬಗ್ಗೆ ಮಾನ್ಯ ಹಣಕಾಸು ಸಮಿತಿಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ :

**ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಅಳವಡಿಸಿ Campus ಗೆ wifi ಸೌಲಭ್ಯವನ್ನು ಪಡೆಯುವ ಬಗ್ಗೆ ಮತ್ತು 54ನೇ ಮಾನ್ಯ ವ್ಯವಸ್ಥಾಪನಾ ಮಂಡಳಿ ವಿಶೇಷ ಸಭೆಯ ತೀರ್ಮಾನದಂತೆ ರೂ.5,95,00,000/- ಗಳ ದರದಲ್ಲಿ ಉದ್ದೇಶಿತ ಕಾರ್ಯವನ್ನು ನಿರ್ವಹಿಸಲು ಅನುಮೋದನೆ ನೀಡಿದ್ದು, ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. 2021-22ನೇ ಆಯವ್ಯಯದ "029-360" Campus Networking and IT Infrastructure to connect main campus / Regional centers" ರಲ್ಲಿ ರೂ.3,00,00,000/- (ರೂ. ಮೂರು ಕೋಟಿ ಮಾತ್ರ) ಗಳನ್ನು ಹಂಚಿಕೆಯಾಗಿದ್ದು, ಉದ್ದೇಶಿತ ಕಾರ್ಯಕ್ಕೆ ರೂ.6,20,00,000/- (ರೂ. ಆರು ಕೋಟಿ ಇಪ್ಪತ್ತು ಲಕ್ಷ ಮಾತ್ರ)ಗಳು ಅವಶ್ಯಕತೆಯಿದ್ದು, ಉಳಿದ ಮೊತ್ತಕ್ಕೆ 2021-22ನೇ ಆಯವ್ಯಯದ "029-360" ನಿಧಿಗೆ ಹೆಚ್ಚುವರಿಯಾಗಿ ರೂ. 3,20,00,000/- (ರೂ. ಮೂರು ಕೋಟಿ ಇಪ್ಪತ್ತು ಲಕ್ಷ ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ 022 - 271 (ದೊಡ್ಡ ಕಾಮಗಾರಿಗಳು) ರಿಂದ ಮರು ಹಂಚಿಕೆ ಮಾಡಲು ಹಣಕಾಸು ಸಮಿತಿಯು ಒಪ್ಪಿತು.**

ವಿಷಯ ಸಂಖ್ಯೆ: 83.13

**ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ 50 ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಹುಂಡಿ ಪಾವತಿಸಿರುವ ಬಗೆಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2020-21ನೇ ಶೈಕ್ಷಣಿಕ ಸಾಲಿನಿಂದ Online Programmes ಗಳನ್ನು ಪ್ರಾರಂಭಿಸಲು ಉದ್ದೇಶಿಸಿ Ordinance Relating to Online Programmes at Karnataka State Open University ಅಧ್ಯಾದೇಶವನ್ನು ODL Regulations 2020 ಪ್ರಕಾರ ಪರಿಷ್ಕರಿಸಿರುವುದನ್ನು ಶೈಕ್ಷಣಿಕ ಮಂಡಳಿಯ 56ನೇ ಸಭೆಯಲ್ಲಿ ಅನುಮೋದಿಸಿ, ಎಲ್ಲಾ ಅಧ್ಯಾಪಕರುಗಳಿಗೆ ಲ್ಯಾಪ್‌ಟಾಪ್ ಒದಗಿಸಲು ತೀರ್ಮಾನಿಸಲಾಗಿರುತ್ತದೆ. ಸದರಿ ತೀರ್ಮಾನವನ್ನು ವ್ಯವಸ್ಥಾಪನಾ ಮಂಡಳಿಯ 162.07 ಸಭೆಯಲ್ಲಿ ಅನುಮೋದಿಸಿರುವ ಹಿನ್ನಲೆಯಲ್ಲಿ 50 (ಐವತ್ತು) Laptops ಗಳನ್ನು ಒಟ್ಟು ರೂ.67,99,986/- (ರೂ. ಅರವತ್ತೇಳು ಲಕ್ಷದ ತೊಂಭತ್ತೊಂಭತ್ತು ಸಾವಿರದ ಒಂಭೈನೂರ ಎಂಭತ್ತಾರು ಮಾತ್ರ)ಗಳ ದರದಲ್ಲಿ 4ಜಿ ನಿಯಮದಡಿ ಮೆ. ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರಿಂದ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಖರೀದಿಸಲಾಗಿರುತ್ತದೆ (ಅನುಬಂಧ-1).

ಮುಂದುವರೆದು, ಸದರಿ ಸಂಸ್ಥೆಯವರು ಈ ಸಂಬಂಧದ ಪಾವತಿಗಾಗಿ ಹುಂಡಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಹಣಕಾಸು ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಹುಂಡಿ ಪಾವತಿ ಕ್ರಮವನ್ನು ಹಣಕಾಸು ಸಮಿತಿಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

**ತೀರ್ಮಾನ :**

**ವಿಶ್ವವಿದ್ಯಾನಿಲಯದಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ Online Programmes ಗಳನ್ನು ಪ್ರಾರಂಭಿಸಲು ಉದ್ದೇಶಿಸಿ Ordinance Relating to Online Programmes at Karnataka State Open University ಅಧ್ಯಾದೇಶವನ್ನು ODL Regulations 2020 ಪ್ರಕಾರ ಪರಿಷ್ಕರಿಸಿರುವುದನ್ನು ಶೈಕ್ಷಣಿಕ ಮಂಡಳಿಯ 56ನೇ ಸಭೆಯಲ್ಲಿ ಅನುಮೋದಿಸಿ, ಎಲ್ಲಾ ಅಧ್ಯಾಪಕರುಗಳಿಗೆ ಲ್ಯಾಪ್‌ಟಾಪ್ ಒದಗಿಸಲು ಅವಶ್ಯವಿರುವ 50 ಲ್ಯಾಪ್‌ಟಾಪ್‌ಗಳನ್ನು 4ಜಿ ನಿಯಮದಡಿ ಮೆ. ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ರವರಿಂದ ಖರೀದಿಸಿ, 50 ಲ್ಯಾಪ್‌ಟಾಪ್ ಗಳಿಗೆ ತಗಲಿರುವ ವೆಚ್ಚ ರೂ. ಒಟ್ಟು ರೂ.67,99,986/- (ರೂ. ಅರವತ್ತೇಳು ಲಕ್ಷದ ತೊಂಭತ್ತೊಂಭತ್ತು ಸಾವಿರದ ಒಂಭೈನೂರ ಎಂಭತ್ತಾರು ಮಾತ್ರ) ಗಳನ್ನು ಪಾವತಿಸಿರುವ ಕ್ರಮಕ್ಕೆ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.**

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಡಿಸಿದ ವಿಷಯಗಳು:**

ವಿಷಯ ಸಂಖ್ಯೆ: 83.14.1

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ವಿವಿಧ ಭತ್ಯೆಗಳನ್ನು ನಿಗದಿಪಡಿಸುವ ಸಂಬಂಧ ಪರಿನಿಯಮಗಳಿಗೆ ಅನುಮೋದನೆ ಬಗ್ಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಎರಡು ಪರಿನಿಯಮಗಳನ್ನು ಸಿದ್ಧಪಡಿಸಲಾಗಿದೆ.

1. Statute Governing Conduct of Delivery of Academic and Skill Development Programmes.
2. Statute Governing the payment of remuneration and allowances for examination related works.

ಮೇಲಿನ ಪರಿನಿಯಮಗಳನ್ನು ಶಾಸನಬದ್ಧ ಸಭೆಗಳಲ್ಲಿ ಅನುಮೋದನೆ ಪಡೆದು ಕರಡು ಪರಿನಿಯಮಗಳನ್ನು ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿಕೊಡಲಾಗಿದ್ದು, ಸದರಿ ವಿಷಯವನ್ನು ಹಣಕಾಸು ಸಮಿತಿಯ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ತೀರ್ಮಾನ :

ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ವಿವಿಧ ಭತ್ಯೆಗಳನ್ನು ನಿಗದಿಪಡಿಸುವ ಸಂಬಂಧ ಕರಡು ಪರಿನಿಯಮಗಳನ್ನು ಪರಿಶೀಲಿಸಿ ಹಣಕಾಸು ಸಮಿತಿಯು ಅನುಸಮರ್ಥನೆ ನೀಡಿತು.

ವಿಷಯ ಸಂಖ್ಯೆ: 83.14.2

**Statute II, Determining the Constitution, Powers and Function of Board of Studies ನ ಪರಿನಿಯಮವನ್ನು ತಿದ್ದುಪಡಿಗೊಳಿಸಿರುವ ಬಗ್ಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗಗಳಿಗೆ ಸಂಬಂಧಿಸಿದಂತೆ, ವಿವಿಯ ಅಧಿನಿಯಮ 1992 ಪ್ರಕರಣ 23(3) ರ ಪ್ರಕಾರ ಪರಿನಿಯಮದ ಸಂಖ್ಯೆ: II Statutes Determining the Constitution, Powers and Function of Board of Studies ಅನ್ನು ರಚಿಸಿ 56ನೇ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸದರಿ ಪರಿನಿಯಮಕ್ಕೆ ದಿನಾಂಕ: 22-07-2002 ರಂದು ಘನತೆವೆತ್ತ ಕುಲಾಧಿಪತಿಗಳು ಅಂಕಿತಮಾಡಿರುತ್ತಾರೆ. ಈ ಸಂಬಂಧ ಈ ಪರಿನಿಯಮ ಅನುಷ್ಠಾನಗೊಳ್ಳಲು ಸಂಖ್ಯೆ: ಕರಾಮುವಿ/ಯುಎ-1/ 16/2002-03 ದಿನಾಂಕ: 22-08-2002 ರ ಪ್ರಕಾರ ಅಧಿಸೂಚನೆ ಹೊರಡಿಸಲಾಗಿತ್ತು.

ಪ್ರಸ್ತುತ, ಯುಜಿಸಿ ನಿಯಮಾವಳಿಗಳನ್ವಯ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ನಡೆಸುತ್ತಿರುವ ಎಲ್ಲಾ ಶಿಕ್ಷಣಕ್ರಮಗಳಿಗೆ ಅನ್ವಯವಾಗುವಂತೆ ಏಕರೂಪದ ಅಧ್ಯಯನ ಮಂಡಳಿಗಳ ರೂಪುರೇಷೆಗಳನ್ನು ಅಳವಡಿಸಿಕೊಳ್ಳಬೇಕಾದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ದಿನಾಂಕ: 22-03-2021 ರ ಅನುಮೋದನೆ ಮೇರೆಗೆ, ಸಮಿತಿಯನ್ನು ಕಚೇರಿ ಆದೇಶದ ಸಂಖ್ಯೆ: ಕರಾಮುವಿ/ ಡೀನ್(ಶೈ)-07/2020-21, ದಿನಾಂಕ: 29-03-2021 ರ ಪ್ರಕಾರ ರಚಿಸಲಾಗಿತ್ತು.

ಸದರಿ ಸಮಿತಿಯು, ಈ ಹಿಂದೆ ಚಾಲ್ತಿಯಲ್ಲಿದ್ದ Statute II, Determining the Constitution, Powers and Function of Board of Studies ನ ಪರಿನಿಯಮ ಮತ್ತು ಪ್ರಸ್ತುತದ ಯುಜಿಸಿ ನಿಯಮಾವಳಿಗಳನ್ವಯ ಕೂಲಂಕುಶವಾಗಿ ಪರಿಶೀಲಿಸಿ Statute II, Determining the Constitution, Powers and Function of Board of Studies ನ (1st Amendment 2021) ಅನ್ನು ಸಿದ್ಧಪಡಿಸಿ ಸದರಿ ಸಮಿತಿಯು ದಿನಾಂಕ: 21-06-2021 ರಂದು ಸಭೆ ಸೇರಿ, ಚರ್ಚಿಸಿ ನಿರ್ಣಯಕೈಗೊಂಡು ಅಂತಿಮವಾಗಿ ತಿದ್ದುಪಡಿ ಪರಿನಿಯಮವನ್ನು ಡೀನ್(ಶೈ) ವಿಭಾಗಕ್ಕೆ ಸಲ್ಲಿಸಿರುತ್ತಾರೆ. ಸದರಿ ಪರಿನಿಯಮದ ಅಧ್ಯಯನ ಮಂಡಳಿಯಲ್ಲಿ ಭಾಗವಹಿಸುವ ಹಾಗು ಪಠ್ಯಕ್ರಮ ಕಾರ್ಯಗಾರಗಳಲ್ಲಿ ಬಾಹ್ಯ ಪರಿಣಿತರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗು ಸಭಾ ಭತ್ಯೆ ಮತ್ತು ಆಂತರಿಕ ಪರಿಣಿತರಿಗೆ ಸಭಾ ಭತ್ಯೆ ನೀಡಲು ಪರಿನಿಯಮ 3.15 ನಲ್ಲಿ ಅವಕಾಶ ಮಾಡಲಾಗಿದೆ. ಸದರಿ ಕರಡು ಪರಿನಿಯಮಕ್ಕೆ ವಿವಿಯ ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆ ಪಡೆದ ನಂತರ ವಿವಿಯ ಅಧಿನಿಯಮ 1992 ಪ್ರಕರಣ 23(3) ರ ಪ್ರಕಾರ ಸರ್ಕಾರದ ಮುಖಾಂತರ ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಿದ್ಧಪಡಿಸಿರುವ ಪರಿನಿಯಮವನ್ನು ಹಣಕಾಸು ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ತೀರ್ಮಾನ :

**ಈಗಾಗಲೇ ಚಾಲ್ತಿಯಲ್ಲಿರುವ Statute II, Determining the Constitution, Powers and Function of Board of Studies ನ ಪರಿನಿಯಮ ಮತ್ತು ಪ್ರಸ್ತುತದ ಯುಜಿಸಿ ನಿಯಮಾವಳಿಗಳನ್ವಯ ಕೂಲಂಕುಶವಾಗಿ ಪರಿಶೀಲಿಸಿ Statute II, Determining the Constitution, Powers and Function of Board of Studies ನ (1st Amendment 2021) ಅನ್ನು ಸಿದ್ಧಪಡಿಸಿ ಸದರಿ ಪರಿನಿಯಮದ ಅಧ್ಯಯನ ಮಂಡಳಿಯಲ್ಲಿ ಭಾಗವಹಿಸುವ ಹಾಗು ಪಠ್ಯಕ್ರಮ ಕಾರ್ಯಗಾರಗಳಲ್ಲಿ ಬಾಹ್ಯ ಪರಿಣಿತರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗು ಸಭಾ ಭತ್ಯೆ ಮತ್ತು**

ಆಂತರಿಕ ಪರೀಕ್ಷಕರಿಗೆ ಸಭಾ ಭತ್ಯೆ ನೀಡಲು ಪರಿನಿಯಮ 3.15 ನಲ್ಲಿ ಅವಕಾಶ ಕಲ್ಪಿಸಿದ್ದು, ವಿವಿಯ ಅಧಿನಿಯಮ 1992 ಪ್ರಕರಣ 23(3) ರ ಪ್ರಕಾರ ಸರ್ಕಾರದ ಮುಖಾಂತರ ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸುವುದಕ್ಕೆ ಹಣಕಾಸು ಸಮಿತಿಯು ಕೂಲಕಂಷವಾಗಿ ಚರ್ಚಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ: 83.14.3**

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ ನಾಲ್ಕು ಅಧ್ಯಯನ ಪೀಠಗಳ ಕರಡು ಪರಿನಿಯಮಗೆ ಅನುಮೋದನೆ ಬಗ್ಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಈ ಕೆಳಕಂಡ ನಾಲ್ಕು ಅಧ್ಯಯನ ಪೀಠಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

1. ಪದ್ಮಭೂಷಣ ಡಾ. ಬಾಲಗಂಗಾಧರನಾಥ ಸ್ವಾಮಿಜಿ, ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠ.
2. ಪದ್ಮಭೂಷಣ ಡಾ. ಶಿವಕುಮಾರ ಸ್ವಾಮಿಜಿ, ಶ್ರೀ ಕ್ಷೇತ್ರ ಸಿದ್ಧಗಂಗಾ ಮಠ.
3. ಶ್ರೀ. ಅನಂತಕುಮಾರ, ಮಾಜಿ ಮಂತ್ರಿಗಳು, ಕೇಂದ್ರ ಸರ್ಕಾರ.
4. His Holiness Jagadguru Dr. Shivarathri Rajendra Mahaswamiji Suttur Mutt, Mysuru.

ಮೇಲಿನ ನಾಲ್ಕು ಮಹನೀಯರ ಪೀಠಗಳ ಕರಡು ಪರಿನಿಯಮಗಳನ್ನು ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿಕೊಡಲಾಗಿದ್ದು, ಸದರಿ ವಿಷಯವನ್ನು ಹಣಕಾಸು ಸಮಿತಿಯ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ :**

**ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪಿಸಲಾಗುವ 4 ಪೀಠಗಳ ಕರಡು ಪರಿನಿಯಮಗಳನ್ನು ಪರಿಶೀಲಿಸಿದ ಸಮಿತಿಯು ಅನುಸಮರ್ಥನೆ ನೀಡಿತು.**

**ವಿಷಯ ಸಂಖ್ಯೆ: 83.14.4**

**ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಅಧ್ಯಯನ ಪೀಠಗಳು ಮತ್ತು ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಅಧ್ಯಯನ ಪೀಠಗಳಿಗೆ ಏಕರೂಪದ ಪರಿನಿಯಮಗಳನ್ನು ಸಿದ್ಧಪಡಿಸಿರುವುದಕ್ಕೆ ಅನುಮೋದನೆ ಬಗ್ಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಅಧ್ಯಯನ ಪೀಠಗಳನ್ನು ಸ್ಥಾಪನೆ ಮಾಡಿದ್ದು, ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಅಧ್ಯಯನ ಪೀಠಗಳಿಗೆ ಪರಿನಿಯಮಗಳನ್ನು ರಚಿಸಲು ಹಾಗೂ ಹಾಲಿ ಇರುವ ಪರಿನಿಯಮಗಳಲ್ಲಿ ಬದಲಾವಣೆಯನ್ನು ತರಲು ಹೊಸ ಪರಿನಿಯಮಗಳನ್ನು ರಚಿಸುವ ಸಂಬಂಧ ಡೀನ್ (ಶೈಕ್ಷಣಿ) ರವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿರುತ್ತದೆ. ಈಗಾಗಲೇ ಸ್ಥಾಪನೆಗೊಂಡಿರುವ ಅಧ್ಯಯನ ಪೀಠಗಳು ಮತ್ತು ಹೊಸ ಅಧ್ಯಯನ ಪೀಠಗಳಿಗೆ ಏಕ ರೂಪದ ಪರಿನಿಯಮಗಳನ್ನು ಸಿದ್ಧಪಡಿಸುವ ಬಗ್ಗೆ ಡೀನ್ (ಶೈಕ್ಷಣಿಕ)ರವರು ಸಭೆಯ ಗಮನಕ್ಕೆ ತಂದು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ಜೊತೆ ಚರ್ಚಿಸಿರುತ್ತಾ, ಅಗತ್ಯ ಮಾರ್ಪಾಡುಗಳೊಂದಿಗೆ ಪರಿನಿಯಮಗಳ ತಿದ್ದುಪಡಿಗೆ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿರುತ್ತಾರೆ.

ಈ ಸಂಬಂಧ ಪರಿಷ್ಕರಿಸಿರುವ ಪರಿನಿಯಮ, ಸಭಾ ನಡಾವಳಿಯನ್ನು ಹಾಗೂ ಇವುಗಳಲ್ಲಿ ರಾಮಮನೋಹರ ಲೋಹಿಯಾ ಪೀಠ, ಕಾಮಧೇನು ಪೀಠ ಹಾಗೂ ಬಿ.ವಿ. ಕಾರಂತ್ ಪೀಠಗಳಿಗೆ ತಲಾ ಹದಿನೈದು ಲಕ್ಷ Fixed Deposits ಇಡಲು ಉದ್ದೇಶಿಸಿ ಹಣಕಾಸು ಸಮಿತಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

ತೀರ್ಮಾನ :

ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಪ್ರಾರಂಭಿಸಿರುವ ರಾಮಮನೋಹರ ಲೋಹಿಯಾ ಪೀಠ, ಕಾಮಧೇನು ಪೀಠ ಹಾಗೂ ಬಿ.ವಿ. ಕಾರಂತ್ ಪೀಠ ಗಳಿಗೆ ತಲಾ ಹದಿನೈದು ಲಕ್ಷ Fixed Deposits ಇಡುವ ಬಗ್ಗೆ ಹಣಕಾಸು ಸಮಿತಿಯು ಚರ್ಚಿಸಿ, ಅನುಮೋದನೆ ನೀಡಿತು.

ವಿಷಯ ಸಂಖ್ಯೆ: 83.14.5

ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಹೆಚ್ಚಿನ ಕಾರ್ಯಭಾರ ವಹಿಸುವ ಬಗ್ಗೆ.

2021–22ನೇ ಸಾಲಿನಿಂದ ಯುಜಿಸಿ ಅನುಮೋದನೆ ಪಡೆದು ಕರಾಮುವಿಯಲ್ಲಿ ಹೊಸದಾಗಿ ಬಿಎಸ್ಸಿ ಹಾಗು ಇನ್ನಿತರೆ ಶಿಕ್ಷಣ ಕಾರ್ಯಕ್ರಮಗಳನ್ನು ಆರಂಭಿಸಲಾಗುತ್ತಿದೆ. ಕರ್ನಾಟಕದಾದ್ಯಂತ ಎಲ್ಲಾ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರವೇಶಾತಿ ಕಲ್ಪಿಸುವ ಸಲುವಾಗಿ ಸ್ನಾತಕ/ ಸ್ನಾತಕೋತ್ತರ ಸಂಪರ್ಕ ಕಾರ್ಯಕ್ರಮ ನಡೆಸುವುದು, ಆಂತರಿಕ ನಿಬಂಧನೆಗಳ ಮೌಲ್ಯಮಾಪನ, ವಿಜ್ಞಾನ ವಿಷಯಗಳ ಲ್ಯಾಬ್‌ಗಳನ್ನು, ಪರೀಕ್ಷೆಗಳನ್ನು ನಡೆಸುವುದು, ಮುಂತಾದ ಶೈಕ್ಷಣಿಕ ಚಟುವಟಿಕೆಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನಡೆಸುವುದು ಅವಶ್ಯಕವಾಗಿದೆ ಎಂದು ಮಾನ್ಯ ಕುಲಪತಿಗಳು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಹೆಚ್ಚಿನ ಕಾರ್ಯಭಾರ ವಹಿಸುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆಯಾಗಿ ಈ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಗಿದೆ.

ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಒಟ್ಟಾರೆಯಾಗಿ ಪ್ರವೇಶಾತಿ ಸಮಾಲೋಚನೆ, ಸಂಪರ್ಕ ಕಾರ್ಯಕ್ರಮ, ವಾರಾಂತ್ಯ ಸಮಾಲೋಚನೆ, ಆಂತರಿಕ ಮೌಲ್ಯಮಾಪನ, ಪ್ರಾಯೋಗಿಕ ಚಟುವಟಿಕೆಗಳು ಹಾಗು ಇನ್ನಿತರ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಈ ಕೆಳಗಿನ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಡೆಸಿದರೆ ಹಂಚಿಕೆಯಾಗಿರುವ ತಲಾ ವಿದ್ಯಾರ್ಥಿ ಆಧಾರದ ಮೇಲೆ ಈ ಕೆಳಗಿನಂತೆ ವಾರ್ಷಿಕ ವೆಚ್ಚಗಳನ್ನು ನೀಡಬಹುದಾಗಿದೆ ಎಂದು ಡೀನ್ (ಅಧ್ಯಯನ ಕೇಂದ್ರಗಳು) ಅವರು ತಿಳಿಸಿರುತ್ತಾರೆ.

| ಕೋರ್ಸುಗಳ ವಿವರ | ವಾರ್ಷಿಕ ವೆಚ್ಚ (ರೂ.ಗಳಲ್ಲಿ) |
|---|---|
| ಬಿಎ/ ಬಿಕಾಂ/ ಬಿಬಿಎ | 700/– |
| ಎಂಎ/ ಎಂಕಾಂ | 1000/– |
| ಎಂಎಸ್ಸಿ | 3500/– |
| ಬಿ.ಎಡ್. | 4000/– |
| ಬಿ.ಎಸ್ಸಿ/ ಬಿಸಿಎ | 3000/– |
| ಬಿ.ಲಿಬ್.ಐ.ಎಸ್ಸಿ./ ಎಂ.ಲಿಬ್.ಐ.ಎಸಿ | 1500/– |
| ಎಂಬಿಎ | 2000/– |

ಇದರೊಂದಿಗೆ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಈ ಹಿಂದೆ ನೀಡುತ್ತಿದ್ದಂತಹ ಪ್ರವೇಶಾತಿ ಪ್ರೋತ್ಸಾಹ ಧನದ ಆದೇಶವನ್ನು ಹಿಂಪಡೆಯಲು ತೀರ್ಮಾನಿಸಲಾಯಿತು ಹಾಗು ಇನ್ನು ಮುಂದೆ ನಡೆಸುವ ಕಾರ್ಯಕ್ರಮಗಳಿಗೆ ಮೇಲ್ಕಂಡಂತೆ ವೆಚ್ಚ ಪಾವತಿಸಲು ತೀರ್ಮಾನಿಸಲಾಯಿತು.

ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಪ್ರತಿ ವಿದ್ಯಾರ್ಥಿಯ ಹಣ ನೀಡುವುದರಿಂದ ಲೆಕ್ಕ ಪತ್ರಗಳನ್ನು ಸರಿಯಾಗಿ ಸಲ್ಲಿಸಲು ಹಾಗು ಒಟ್ಟಾರೆಯಾಗಿ ಕಾರ್ಯಕ್ರಮ ಮುಗಿದ ನಂತರ ಹಾಜರಾತಿ ಇವುಗಳನ್ನು ಪರಿಶೀಲಿಸಿ, ಹಣ ನೀಡಬಹುದಾಗಿದೆ ಹಾಗು ಅಧ್ಯಯನ ಕೇಂದ್ರಗಳು ವಿ.ವಿ.ಯಿಂದ ನಿಗದಿತ ಪ್ರಮಾಣದಲ್ಲಿ ಸಂಭಾವನೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಒಂದು ಪಕ್ಷ ವಿಶ್ವವಿದ್ಯಾನಿಲಯವು ಶುಲ್ಕದಲ್ಲಿ ಏರಿಕೆ ಮಾಡಿದರು, ನೀಡುವ ಸಂಭಾವನೆ ಮೊತ್ತದಲ್ಲಿ ಪ್ರತಿ ವರ್ಷ ವ್ಯತ್ಯಾಸ ಕಾಣುವುದಿಲ್ಲ. ನಿಗದಿತ ಅವಧಿಯ ತನಕ ಈ ಸಂಭಾವನೆ ವ್ಯವಸ್ಥೆಯನ್ನು ಮುಂದುವರಿಸಬಹುದಾಗಿದೆ ಎಂಬುದನ್ನು ಸಭೆಯು ಅನುಮೋದಿಸಿತು.

ಇದರೊಂದಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಎಲ್ಲಾ ಸ್ನಾತಕೋತ್ತರ ವಿಜ್ಞಾನ ವಿಷಯಗಳ ಪ್ರಾಯೋಗಿಕ ತರಗತಿಗಳನ್ನು, ಪ್ರಾಯೋಗಿಕ ಪರೀಕ್ಷೆಗಳನ್ನು ಹಾಗು ಎಂ.ಬಿ.ಎ ಸೆಮಿನಾರ್‌ಗಳನ್ನು ವಿವಿಧ ಕೇಂದ್ರಗಳಲ್ಲಿ ನಡೆಸಲು ತೀರ್ಮಾನಿಸಲಾಯಿತು. ಪ್ರಸ್ತುತ, ಕರಾಮುವಿಯ ರಾಜ್ಯದಾದ್ಯಂತ ದೂರ ಶಿಕ್ಷಣ ನೀಡಲು ಏಕೈಕ ಸಂಸ್ಥೆಯಾಗಿರುವುದರಿಂದ ವಿವಿಧ ಕೇಂದ್ರಗಳಲ್ಲಿ ಪ್ರಾಯೋಗಿಕ ತರಗತಿಗಳನ್ನು, ಪ್ರಾಯೋಗಿಕ ಪರೀಕ್ಷೆಗಳನ್ನು ಹಾಗು ಎಂ.ಬಿ.ಎ ಸೆಮಿನಾರ್‌ಗಳನ್ನು ನಡೆಸುವುದರಿಂದ ಮುಂದಿನ ಸಾಲುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಕೆಳಕಂಡ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಮೇರೆಗೆ ಪ್ರಾಯೋಗಿಕ ತರಗತಿಗಳನ್ನು, ಪ್ರಾಯೋಗಿಕ ಪರೀಕ್ಷೆಗಳನ್ನು ಹಾಗು ಎಂ.ಬಿ.ಎ ಸೆಮಿನಾರ್‌ಗಳನ್ನು ನಡೆಸಲು ತೀರ್ಮಾನಿಸಲಾಯಿತು.

1. ಮೈಸೂರು
2. ಬೆಂಗಳೂರು
3. ಉಡುಪಿ/ ಮಂಗಳೂರು
4. ಧಾರವಾಡ/ ಬೆಳಗಾವಿ
5. ಕಲುಬುರ್ಗಿ
6. ಶಿವಮೊಗ್ಗ/ ದಾವಣಗೆರೆ

ಸದರಿ ಕೇಂದ್ರಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಂಬಂಧಪಟ್ಟ ಸ್ಥಳೀಯ ವಿಶ್ವವಿದ್ಯಾನಿಲಯ ಅಥವಾ ಸರ್ಕಾರಿ ಕಾಲೇಜುಗಳಲ್ಲಿ ನಡೆಸಲು ಉದ್ದೇಶಿಸಿತು. ಈ ಹಿನ್ನೆಲೆಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಹೆಚ್ಚಿನ ಕಾರ್ಯಭಾರ ವಹಿಸುವ ಬಗ್ಗೆ ಹಣಕಾಸು ಸಮಿತಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ :

**ಪ್ರಸ್ತಾವನೆ ಬಗ್ಗೆ ಚರ್ಚಿಸಿದ ಸಭೆಯು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಹೆಚ್ಚಿನ ಕಾರ್ಯಭಾರ ವಹಿಸುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನವನ್ನು ಅನುಮೋದಿಸಿತು ಹಾಗೂ ಪರಿಷ್ಕೃತ ವಾರ್ಷಿಕ ವೆಚ್ಚಗಳನ್ನು ನೀಡಲು ಒಪ್ಪಿತು.**

***

ಹಣಕಾಸು ಸಮಿತಿಯ 83ನೇ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಪತಿಗಳು**
**ಹಣಕಾಸು ಸಮಿತಿ ಅಧ್ಯಕ್ಷರು**

**ಹಣಕಾಸು ಅಧಿಕಾರಿಗಳು**
**ಹಣಕಾಸು ಸಮಿತಿ ಸದಸ್ಯ ಕಾರ್ಯದರ್ಶಿಗಳು**